ಸದಸ್ಯರಾದ ನಾವು ರಾಜ್ಯಪಾಲರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸುತ್ತೇವೆ.''

ಶ್ರೀ ಚಂದ್ರಶೇಖರ್ ಸದಾಶಿವ ನಾಯಕ್ (ಗೋಕಾಕ್): ಮಾನ್ಯ ಅಧ್ಯಕ್ಷರೇ, ನಾನು ಈ ಪ್ರಸ್ತಾವನೆಯನ್ನು ಅನುಮೋದಿಸುತ್ತೇನೆ.

ಪ್ರಸ್ತಾವನೆಯನ್ನು ಮಂಡಿಸಲಾಯಿತು:

(10) ರಾಜ್ಯ ಪಾಲರ ಭಾಷಣಕ್ಕೆ ಸಂಬಂಧಿಸಿದಂತೆ ವಂದನಾರ್ಪಣ ಪ್ರಸ್ತಾವದ ಚರ್ಚೆ

+ ಶ್ರೀ ಬಿ.ಸೋಮಶೇಖರ್ (ಮಳವಳ್ಳಿ): ಮಾನ್ಯ ಸಭಾಧ್ಯಕ್ಷರೇ, ನಾವು 12ನೆಯ ಲೋಕಸಭೆಯ ಚುನಾವಣೆಯ ನಂತರ ಈ ಒಂದು ವಿಧಾನಸಭೆಯನ್ನು ಕರೆದಿದ್ದೇವೆ. ಈ ಚುನಾವಣೆಯಲ್ಲಿ ಅನೇಕ ರಾಜಕೀಯ ಬೆಳವಣಿಗೆಗಳನ್ನು ನಾವು ನೋಡಿದ್ದೇವೆ. ನಮಗೆಲ್ಲಾ ಗೊತ್ತಿರುವ ಹಾಗೆ ಈ ಚುನಾವಣೆ ಯಾರಿಗೂ ಬೇಕಾಗಿರಲಿಲ್ಲ. ಆದರೂ ಸಹಿತ ಈ ಚುನಾವಣೆ ನಮ್ಮ ಮೇಲೆ ಬಂತು. ಈ ಚುನಾವಣೆಯಲ್ಲಿ ಯಾವ ಇಷ್ಯೂ ಕೂಡ ಇರಲಿಲ್ಲ. ಅಂದರೆ ಬೇರೆ ಬೇರೆ ಚುನಾವಣೆಗಳಲ್ಲಿ ಒಂದಲ್ಲ ಒಂದು ಇಷ್ಯೂ ಇರುತ್ತಿತ್ತು. ಆದರೂ ಅನಿವಾರ್ಯವಾಗಿ ನಾವು ಚುನಾವಣೆಯನ್ನು ಎದುರಿಸಬೇಕಾಗಿ ಬಂತು. ಈಗ ಚುನಾವಣೆಯ ಫಲಿತಾಂಶಗಳು ಬಂದಿದೆ. ಚುನಾವಣೆಗಳ ಫಲಿತಾಂಶಗಳು ಬಂದಮೇಲೆ ಯಾವುದೇ ಒಂದು ಪಕ್ಷದಲ್ಲೂ ಸಹ ಒಂದು ಸ್ಥಿರತೆ ಬಂದಿಲ್ಲ. ಎಲ್ಲಾ ಕಡೆ ಅಸ್ಥಿರತೆ, ಎಲ್ಲಾ ನಾಯಕರಲ್ಲೂ ದುಗುಡ, ಆತಂಕ ಉಂಟಾಗಿದೆ. ಮತ್ತು ಈ ಚುನಾವಣೆಯಿಂದ ನಾವು ಮತ್ತೊಂದು ಬೆಳವಣಿಗೆಯನ್ನು ಏನು ಕಂಡಿದ್ದೇವೆ ಎಂದು ಹೇಳಿದರೆ, ಒಂದು. ಇಷ್ಯೂ ಮೇಲೆ ಇದು ನಡೆದಿಲ್ಲ, ಮತ್ತೊಂದು ವಿಚಾರ, ಈ ಚುನಾವಣೆ ನಮ್ಮ ರಾಜ್ಯದಲ್ಲಿ ತೆಗೆದುಕೊಂಡರೆ ಪಕ್ಷಾಧಾರಿತವಾಗಿ ನಡೆಯುವುದಕ್ಕೆ ಬದಲಾಗಿ ಎಷ್ಟೋ ಕಡೆ ಜಾತಿಯ ಒಂದು ವೈಷಮ್ಯ ಹೆಚ್ಚಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಇದನ್ನು ನಾವೆಲ್ಲರೂ ಅನುಭವ ಪಟ್ಟಿದ್ದೇವೆ. ಪ್ರತಿ ಚುನಾವಣೆಗಳು ರಾಜಕೀಯ ಪಕ್ಷದ ಆಧಾರದಮೇಲೆ ನಡೆಯುತ್ತಿತ್ತು. ಆದರೆ ಈ ಚುನಾವಣೆಯಲ್ಲಿ ವಿಶೇಷವಾದ ಬೆಳವಣಿಗೆ ಏನು ಎಂದು ಹೇಳಿದರೆ ರಾಜಕೀಯ ಪಕ್ಷದ ಒಳಗಡೆಯೇ ಜಾತಿಯ ಬೆಳವಣಿಗೆ. ಜಾತಿಯ ಆಧಾರದಮೇಲೆ, ಗುಂಪುಗಳ ಆಧಾರದಮೇಲೆ ನಡೆದಿರತಕ್ಕಂಥ ಚುನಾವಣೆ. ಮತ್ತೆ ಮತ್ತೊಂದು ಬೆಳವಣಿಗೆ ಏನು ಎಂದು ಹೇಳಿದರೆ 1996ರಲ್ಲಿ ಮತ್ತು 1998ರ ಎರಡು ಚುನಾವಣೆಗಳಲ್ಲಿ ಈ ಕೇಂದ್ರೀಕೃತವಾಗಿದ್ದಂಥ ಅಧಿಕಾರ ಇವ್ಹೊತ್ತು ರಾಜ್ಯಗಳಿಗೆ ಹಂಚಿಹೋಗಿದೆ. ನಿಜವಾದಂಥ ಒಂದು ಒಕ್ಕೂಟದ ವ್ಯವಸ್ಥೆ ಅಂದರೆ ಫೆಡರಲ್ ಸಿಸ್ಟಂ ಎಂದು ನಾವು ಏನು ಹೇಳುತ್ತೇವೆ, ಈ ಒಕ್ಕೂಟದ ವ್ಯವಸ್ಥೆ ಈ ಎರಡು ಚುನಾವಣೆಗಳಿಂದ ಬಹಳ ಪ್ರಬಲವಾಗಿ ಹುಟ್ಟಿದೆ ಎನ್ನುವುದನ್ನು

ನಾವೆಲ್ಲರೂ ಒಪ್ಪಿಕೊಳ್ಳಬೇಕಾದಂಥ ವಿಚಾರ. ಮೊದಲು ಹೆಸರಿಗೆ ಮಾತ್ರ ಒಕ್ಕೂಟದ ವ್ಯವಸ್ಥೆ ಇತ್ತು. ಆದರೆ ಅಧಿಕಾರವೆಲ್ಲಾ ಕೇಂದ್ರದಲ್ಲಿ ಕೇಂದ್ರೀಕೃತವಾಗಿತ್ತು ಹೆಸರಿಗೆ ಮಾತ್ರ, ನೆಪ ಮಾತ್ರಕ್ಕೆ ಮಾತ್ರ ಒಕ್ಕೂಟದ ವ್ಯವಸ್ಥೆ ಇತ್ತು. ಆದರೆ ಇವೊತ್ತು ನಿಜವಾದ ಒಕ್ಕೂಟದ ವ್ಯವಸ್ಥೆ ನಮ್ಮಲ್ಲಿ ಬಂದಿದೆ. ಮತ್ತೊಂದು ಬೆಳವಣಿಗೆ ಎಂದರೆ ಸಮ್ಮಿಶ್ರ ಸರ್ಕಾರ ರಚನೆ ಅದೂ ಸಹ ಎರಡು ಚುನಾವಣೆಗಳಿಂದ ಬಂದಿದೆ. ಇದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಿಜವಾಗಿಯೂ ಕೂಡ ಬಹಳ ಒಳ್ಳೆಯ ಬೆಳವಣಿಗೆ ಎಂಬುದನ್ನು ನಾವು ತಿಳಿದುಕೊಳ್ಳಬೇಕು. ಕಾರಣ ಏನೆಂದು ಹೇಳಿದರೆ ಈ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮೊದಲು ಏನಿತ್ತು? ಒಂದು ಪಕ್ಷ ಯಾವುದೇ ಒಂದು ವಿಷಯದ ಆಧಾರದಮೇಲೆ ಬಹುಮತವನ್ನು ಪಡೆದರೆ ಅವರು ಸ್ವೇಚ್ಛಾಚಾರ ಅಧಿಕಾರವನ್ನು ನಡೆಸಿ ಸಣ್ಣಪುಟ್ಟ ಪಕ್ಷಗಳು, ಕಡಿಮೆ ಮತಗಳನ್ನು ಪಡೆದುಕೊಂಡು ಬಂದಂಥ ಪಕ್ಷಗಳ ಮಾತಿಗೆ ಬೆಲೆ ಇಲ್ಲದೆ ಇರತಕ್ಕಂಥ ವ್ಯವಸ್ಥೆ ಇತ್ತು. ಆದರೆ ಇವೊತ್ತಿನ ವ್ಯವಸ್ಥೆ ಏನಾಗಿದೆ ಸಣ್ಣಪುಟ್ಟ ಪಕ್ಷಗಳು ಬಹಳ ಕಡಿಮೆ ಸಂಖ್ಯೆಯಲ್ಲಿ ಗೆದ್ದಿರತಕ್ಕಂತಹವರಿಗೂ ಬೆಲೆ ಬಂದಿದೆ. ಇದು ನಿಜವಾಗಿಯೂ ಪ್ರಜಾಪ್ರಭುತ್ವದಲ್ಲಿ ಒಳ್ಳೆಯ ವ್ಯವಸ್ಥೆ. ಈ ಒಂದು ಒಳ್ಳೆಯ ಬೆಳವಣಿಗೆಗೆ ನಾವು ಒಂದು ರೂಪ ಕೊಡಬೇಕಾಗಿದೆ. ಇದಕ್ಕೆ ರೂಪ ಕೊಡಬೇಕಾದರೆ ಪ್ರತಿಯೊಂದು ರಾಜಕೀಯ ಪಕ್ಷಗಳ ಮುಖಂಡರೂ ಸಹ ಈ ವ್ಯವಸ್ಥೆಯನ್ನು ಧೃಡವಾಗಿ ಬೆಳೆಸಿಕೊಂಡು ಹೋಗಬೇಕಾಗುತ್ತದೆ. ಈ ಕೋ-ಆಪರೇಟಿವ್ ಫೆಡರಲಿಸಂ ಬಹಳ ಬೇರೂರ ಬೇಕಾದರೆ ಈ ಒಂದು ವ್ಯವಸ್ಥೆಗೆ ನಾವು ಬುನಾದಿ ಹಾಕಬೇಕಾದರೆ ಈ ಬೆಳವಣಿಗೆಯನ್ನು ನಾವು ಪ್ರಾದೇಶಿಕ ಶಕ್ತಿಗಳ ರೂಪದಲ್ಲಿ ತೆಗೆದುಕೊಂಡು ಹೋಗತಕ್ಕಂಥ ಅವಕಾಶವನ್ನು ಕೊಡಬಾರದು. ಅಂದರೆ ಈ ರೀಜನಲ್ ಫೋರ್ಸಸ್ ಎಂದು ನಾವು ಏನು ಕರೆಯುತ್ತೇವೆ, ಅದಕ್ಕೆ ಅವಕಾಶವನ್ನು ಕೊಡಬಾರದು. ಈ ಎಲ್ಲಾ ಪ್ರಾದೇಶಿಕತೆಯನ್ನು ಬಿಟ್ಟು ನಾವು ಈ ಒಂದು ಫೆಡರಲ್ ಸಿಸ್ಟಂ ಅನ್ನು ಕಾಪಾಡಿಕೊಂಡು ಹೋಗಬೇಕಾಗುತ್ತದೆ.

4.00 ಪಿ.ಎಂ

ಈ ಕೊಯಲಿಷನ್ ಪಾಲಿಟಿಕ್ಸ್ ಎಂದು ಈ ಒಂದು ರಾಜಕೀಯ ನಮ್ಮ ದೇಶದಲ್ಲಿ ಆರೋಗ್ಯಕರವಾದಂತಹ ಬೆಳವಣಿಗೆಯಾಗಿದೆ. ಅದನ್ನು ನಾವು ಸಹ ಪೋಷಿಸಿಕೊಂಡು ಹೋಗಬೇಕಾಗುತ್ತದೆ. ಇದು ನಮ್ಮ ದೇಶದಲ್ಲಿ ಒಂದೇ ಅಲ್ಲ, ಪ್ರಪಂಚದಲ್ಲಿ ಅನೇಕ ರಾಷ್ಟ್ರಗಳಲ್ಲಿ ಈ ಒಂದು ವ್ಯವಸ್ಥೆ ಯಶಸ್ವಿಯಾಗಿ ನಡೆದುಕೊಂಡು ಬರುತ್ತಾ ಇದೆ. ಇದರಲ್ಲಿ ಯಾವುದೇ ಪಕ್ಷಕ್ಕೂ ಜನತೆ ಬಹುಮತವನ್ನು ಕೊಟ್ಟಿಲ್ಲ. ರಾಜ್ಯ ವಿಧಾನಸಭೆಗಳ ಚುನಾವಣೆ ಒಂದು ವಿಷಯದ ಆಧಾರದ ಮೇಲೆ ನಡೆಯಿತು. ಅದನ್ನು ನಾವು ಒಂದಕ್ಕೂ ಮತ್ತೊಂದಕ್ಕೂ ಸಂಬಂಧವನ್ನು ಕಲ್ಪಿಸಿಕೊಂಡು ಡೆಮಾಕ್ರಟಿಕಲಿ ಎಲೆಕ್ಟೆಡ್ ಗೌವರ್ನ್‌ಮೆಂಟ್‌ಗಳನ್ನು ಅಸ್ಥಿರ ಮಾಡುವಂತಹ ವಿಚಾರವನ್ನು ಯಾರೂ ಸಹ ಮಾಡಬಾರದು. ನಮ್ಮ ಸರ್ಕಾರ 1994ರಲ್ಲಿ ಅತ್ಯಧಿಕ ಬಹುಮತವನ್ನು ಗೆದ್ದು ಬಂದಿದೆ.

ನಮ್ಮ ಅವಧಿ 1999ರ ಡಿಸೆಂಬರ್‌ವರೆಗೆ ಇದೆ. ಈಗ ನಡೆದಂತಹ ಲೋಕಸಭೆಯ ಚುನಾವಣೆಗೆ ಜನತೆ ಅವರದೇ ಆದಂತಹ ರೀತಿಯಲ್ಲಿ ಯೋಚನೆ ಮಾಡಿ ಮತವನ್ನು ಕೊಟ್ಟಿದ್ದಾರೆ. ಅದನ್ನು ರಾಜಕೀಯ ಪಕ್ಷಗಳು ನೀವು ಅಲ್ಲಿ ಸೋತಿದ್ದೀರಿ, ಇಲ್ಲಿ ನೀವು ರಾಜೀನಾಮೆಯನ್ನು ಕೊಡಬೇಕು, ನೈತಿಕ ಮಟ್ಟವನ್ನು ನೀವು ಎತ್ತಿ ಹಿಡಿಯಬೇಕೆಂಬ ವಿಚಾರಗಳನ್ನು ಎಲ್ಲಾ ರಾಜಕೀಯ ಪಕ್ಷಗಳ ಮುಖಂಡರುಗಳು ಮಾಡುತ್ತಿದ್ದಾರೆ. ನಾನು ಒಂದು ವಿಚಾರವನ್ನು ಕೇಳಲಿಚ್ಛಿಸುತ್ತೇನೆ. ಒಂದೂವರೆ ವರ್ಷಗಳ ಹಿಂದೆ ಹನ್ನೊಂದನೆಯ ಲೋಕಸಭೆ ಚುನಾವಣೆ ನಡೆಯಿತು. ಆಗ ತಮಿಳುನಾಡಿನಲ್ಲಿ 39 ಸ್ಥಾನಗಳ ಪೈಕಿ ಶ್ರೀಮತಿ ಜಯಲಲಿತರವರು ಆ 39 ಸ್ಥಾನದಲ್ಲೂ ಸೋತರು. ಅವರು ವಿಧಾನಸಭೆಗೆ ಕೂಡ ಗೆಲ್ಲುವುದಕ್ಕೆ ಆಗಲಿಲ್ಲ. ಆದರೆ ಒಬ್ಬ ಅಭ್ಯರ್ಥಿ ಮಾತ್ರ ಬೇರೆ ಪಕ್ಷದವರು ಇವರ ಪಕ್ಷಕ್ಕೆ ಸೇರಿದಂತವರು ಅವತ್ತು ಗೆದ್ದರು. ಆಗ ಏನು ಹೇಳುತ್ತಿದ್ದೀರಿ, ತಮಿಳುನಾಡಿನ ಜನತೆ ಶ್ರೀಮತಿ ಜಯಲಲಿತರವರ ಮೇಲೆ ಇದ್ದಂತಹ ಭ್ರಷ್ಟಾಚಾರ, ಅಪರಾಧಿಗಳನ್ನು ಗುರುತಿಸಿ ಜನತೆ ಅವರನ್ನು ಸೋಲಿಸಿದ್ದಾರೆ, ಸರಿಯಾದ ಬುದ್ಧಿ ಕಲಿಸಿದ್ದಾರೆಂದು ನಾವೆಲ್ಲರೂ ಹೇಳಿದೆವು. ಆದರೆ ಒಂದೂವರೆ ವರ್ಷಗಳಿಂದೀಚೆಗೆ ತಮಿಳುನಾಡಿನಲ್ಲಿ ಯಾವುದೇ ರೀತಿಯಾದಂತಹ ಬೆಳವಣಿಗೆಯಾಗಲಿಲ್ಲ, ಮತ್ತೆ ಶ್ರೀಮತಿ ಜಯಲಲಿತರವರಿಗೆ ಸರ್ಕಾರ ರಚನೆ ಮಾಡುವುದಕ್ಕೆ ಆಗಲಿ, ಬದಲಾವಣೆಯಾಗುವುದಕ್ಕೆ ಅವಕಾಶ ಸಿಗಲಿಲ್ಲ. ಈಗ ಒಂದೂವರೆ ವರ್ಷಗಳ ನಂತರ ಇವತ್ತು ಚುನಾವಣೆಯಲ್ಲಿ ಜನತೆ ಅವರಿಗೆ ಬೆಂಬಲವನ್ನು ಕೊಟ್ಟಿದ್ದಾರೆ. ಇದಕ್ಕೆ ನೀವು ಏನು ಹೇಳುತ್ತೀರಿ? ಅಷ್ಟು ಬೇಗ ಜನತೆ ಅವರಮೇಲೆ ಭ್ರಷ್ಟಾಚಾರ ನಿವಾರಣೆ ಮಾಡಿದ್ದಾರೆಂದು ಹೇಳಬೇಕೇ? ಇವತ್ತು ಅವರು ಮಾನ್ಯ ವಾಜಪೇಯಿಯವರ ಬೆಂಬಲಕ್ಕೆ ನಿಂತಿದ್ದಾರೆ. ಇವತ್ತು ನಮ್ಮ ಬಿ.ಜೆ.ಪಿ. ಮುಖಂಡರನ್ನು ಕೇಳುತ್ತಿದ್ದೇನೆ. ನೀವು ಅವರಿಗೆ ಯಾವ ಒಂದು ಅಳತೆಗೋಲನ್ನು ಹಾಕುತ್ತೀರಿ. ಅದೇ ರೀತಿಯಲ್ಲಿ ಬಿ.ಜೆ.ಪಿ ಸರ್ಕಾರಗಳು ಇದ್ದಂತಹ ರಾಜ್ಯಗಳು, ಶಿವಸೇನೆಯ ಜೊತೆಗೆ ಸರ್ಕಾರ ರಚನೆ ಮಾಡಿದಂತಹ ಸರ್ಕಾರಗಳು ಅದು ಮಹಾರಾಷ್ಟ್ರವಿರಬಹುದು, ಗುಜರಾತ್ ಇರಬಹುದು, ರಾಜಸ್ಥಾನವಿರಬಹುದು, ಹಾಗೆ ಕಾಂಗ್ರೆಸ್ ಆಡಳಿತ ಮಾಡಿದಂತಹ ಹಿಮಾಚಲ ಪ್ರದೇಶವಿರಬಹುದು, ಒರಿಸ್ಸಾ ರಾಜ್ಯವಿರಬಹುದು, ಹೀಗೆ 8-9ರಾಜ್ಯಗಳಲ್ಲಿ ವಿವಿಧ ರೀತಿಯ ತೀರ್ಮಾನವನ್ನು ಜನತೆ ಕೊಟ್ಟಿದ್ದಾರೆ. ಒಂದು ರಾಜ್ಯದಲ್ಲಿ ಸರ್ಕಾರಗಳು ಯಾವ ಪಕ್ಷದಲ್ಲಿ ಇದೆ, ಅದರ ವಿರುದ್ಧವಾದಂತಹ ಮತವನ್ನು ತೀರ್ಮಾನವನ್ನು ಕೆಲವರು ಕೊಟ್ಟಿದ್ದಾರೆ. ಆದುದರಿಂದ ಎಲ್ಲರಿಗೂ ಒಂದೇ ರೀತಿಯಲ್ಲಿ ಅಳತೆಗೋಲನ್ನು ಹಾಕುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ನಾವು ತಿಳಿದುಕೊಳ್ಳಬೇಕಾದಂಥಾದ್ದು ಯಾವುದೇ ರಾಜ್ಯ ಸರ್ಕಾರದ ಮೇಲೆ ಕೂಡುವಂತಹ ತೀರ್ಮಾನವಲ್ಲ, ಇದು ರಾಷ್ಟ್ರದಲ್ಲಿ ಯಾವ ಸರ್ಕಾರ ರಚನೆ ಮಾಡಬೇಕು, ಯಾರು ಪ್ರಧಾನಮಂತ್ರಿಯಾಗಬೇಕೆನ್ನುವಂತಹ ಒಲವನ್ನು ರಾಜ್ಯದ ಜನತೆ ತೋರಿಸಿದ್ದಾರೆ. ಅದನ್ನು ನಾವು ಗೌರವಿಸಬೇಕು, ಇವತ್ತು ಜನತೆ ಯಾರಿಗೆ ಬೆಂಬಲವನ್ನು ಕೊಟ್ಟಿದ್ದಾರೆ ಅದನ್ನು ನಾವು ಗೌರವಿಸಬೇಕು. ಆದರೆ ಇಲ್ಲಿ ನಮ್ಮನ್ನು

ಪ್ರಶ್ನೆ ಮಾಡುವಂತಹ ಕಾಲ ಇನ್ನು ಒಂದು ವರ್ಷ ಒಂಭತ್ತು ತಿಂಗಳುಗಳು ಇದೆ. ಪ್ರಜಾಪ್ರಭುತ್ವದ ಸಿದ್ಧಾಂತ ಏನು ಎಂದರೆ ಐದು ವರ್ಷಗಳು ನಮ್ಮ ರಾಜ್ಯಸರ್ಕಾರಕ್ಕೆ ಅವಕಾಶವನ್ನು ಕೊಟ್ಟಿದ್ದಾರೆ. ಇವತ್ತು ಮೂರು ವರ್ಷ ಮೂರು ತಿಂಗಳುಗಳು ನಾವು ಅಧಿಕಾರವನ್ನು ನಡೆಸಿದ್ದೇವೆ. ಇನ್ನು ಒಂದು ವರ್ಷ ಒಂಭತ್ತು ತಿಂಗಳುಗಳ ಕಾಲ ಇದೆ. ನಾವು ಅದನ್ನು ಯೋಚನೆ ಮಾಡಬೇಕಾಗಿದೆ. ನಾವು ಮೂರು ವರ್ಷಗಳ ಕಾಲ ಏನು ಮಾಡಿದ್ದೇವೆ, ಹಿಂದೆ ಏನು ಆಗಿತ್ತು, ನಾವು ಜನತೆಯ ಮುಂದೆ ಏನು ವಿಚಾರಗಳನ್ನು ಇಡುತ್ತಿದ್ದೇವೆಂಬುದನ್ನು ನಾವು ಯೋಚನೆ ಮಾಡಿದರೆ 1994ರಲ್ಲಿ ನಮ್ಮ ಸರ್ಕಾರ ಅಧಿಕಾರಕ್ಕೆ ಬಂತು. ಇದರ ಹಿಂದೆ ಐದು ವರ್ಷಗಳ ಕಾಲ ಅಧಿಕಾರದಲ್ಲಿದ್ದಂತಹ ಕಾಂಗ್ರೆಸ್ ಸರ್ಕಾರವನ್ನು ಸೋಲಿಸಿ ನಮಗೆ ಬೆಂಬಲವನ್ನು ಕೊಟ್ಟರು. ಅವರು ಬೆಂಬಲವನ್ನು ಕೊಟ್ಟಮೇಲೆ ಏನು ಮಾಡಿದ್ದೇವೆ. ಯಾವ ಯಾವ ಕ್ಷೇತ್ರಗಳಲ್ಲಿ ಯಾವ ಯಾವ ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದೇವೆ. ಹಿಂದೆ ಮಾಡಿರುವಂಥಾದ್ದು, ನಾವು ಮಾಡಿರುವಂಥಾದ್ದು ಏನು ಎಂಬುದನ್ನು, ಅದರ ಹೋಲಿಕೆ, ಇವೆಲ್ಲವನ್ನೂ ನಾವು ಯೋಚನೆ ಮಾಡಿದರೆ ನಿಜವಾಗಿಯೂ ನಮ್ಮ ವಿರೋಧಪಕ್ಷದ ಸದಸ್ಯರುಗಳನ್ನು ನಾವು ಕೇಳುತ್ತೇನೆ. ಈ ಒಂದು ಅಭಿವೃದ್ಧಿ ಕೆಲಸದಲ್ಲಿ ತಾವು ನಡೆದುಕೊಂಡ ರೀತಿಯನ್ನು ನೋಡಿದರೆ ಖಂಡಿತವಾಗಿಯೂ ಇನ್ನು ಎರಡು ವರ್ಷಗಳ ಕಾಲ ನಮಗೆ ತಾವು ಸಹಕಾರವನ್ನು ಕೊಡುತ್ತೀರಿ. ನಾವು ಸರ್ಕಾರವನ್ನು ಪೂರ್ಣ ಅವಧಿಯನ್ನು ಮುಗಿಸುತ್ತೇವೆಂದು ತಮ್ಮಲ್ಲಿ ಹೇಳುತ್ತೇನೆ. ಈಗ ಆರ್ಥಿಕ ಪರಿಸ್ಥಿತಿಯ ಬಗ್ಗೆ ನೋಡುವುದಾದರೆ ನಮ್ಮ ಸರ್ಕಾರ ಬಂದಾಗ ನಮ್ಮ ಮೇಲೆ ಸುಮಾರು ಆರು ನೂರು, ಏಳು ನೂರು ಕೋಟಿ ರೂಪಾಯಿಗಳನ್ನು ಸಾಲಬಿಟ್ಟು ಹೋಗಿದ್ದರು. ನಮ್ಮ ಸರ್ಕಾರ ಬಂದಮೇಲೆ ಈ ಸಾಲಗಳೆಲ್ಲವನ್ನೂ ತೀರಿಸಿ ನಮ್ಮದೇ ಆದಂತಹ ಉತ್ಪತ್ತಿ, ಆದಾಯದಲ್ಲಿ ಆರ್ಥಿಕ ಸ್ಥಿರತೆಯನ್ನು ಕಂಡಿದ್ದೇವೆ. ಅನೇಕ ಕಾರ್ಯಕ್ರಮಗಳನ್ನು ನಾವು ಹಮ್ಮಿಕೊಂಡಿದ್ದೇವೆ. ನಮ್ಮ ಮೇಲೆ ಇದ್ದಂತಹ ಸಾಲವನ್ನು ತೀರಿಸುವುದರ ಜೊತೆಗೆ ರೈತರ ಮೇಲೆ ಇದ್ದಂತಹ ಬಡ್ಡಿ ಮೇಲೆ ಸುಸ್ತಿ ಬಡ್ಡಿ ಏನು ಇತ್ತು, ಅದನ್ನು ನಾವು ಐತಿಹಾಸಿಕವಾಗಿ ತೀರ್ಮಾನವನ್ನು ತೆಗೆದುಕೊಂಡು ನಾವು ಮನ್ನಾ ಮಾಡುತ್ತಿದ್ದೇವೆ. ಅದಕ್ಕೆ ಸುಮಾರು ನೂರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ, ಮತ್ತು ಪಡಿತರ ವ್ಯವಸ್ಥೆಗೆ ಸುಮಾರು 126 ಕೋಟಿ ರೂಪಾಯಿಗಳನ್ನು ನಮ್ಮ ಸರ್ಕಾರದಿಂದ ಸೇರಿಸಿ ಬಡವರಿಗೆ ಅಗ್ಗದ ದರದಲ್ಲಿ ಪಡಿತರ ವ್ಯವಸ್ಥೆಯ ಮುಖಾಂತರ ಆಹಾರವನ್ನು ನಾವು ಹಂಚುತ್ತಿದ್ದೇವೆ. ಇದರಿಂದ ನಮ್ಮ ಸರ್ಕಾರದ ಮೇಲೆ ನೂರ ಇಪ್ಪತ್ತಾರು ಕೋಟಿ ರೂಪಾಯಿಗಳು ಹೊರೆ ಬೀಳುತ್ತದೆ. ಇದಾದ ಮೇಲೆ ಈ ಚುನಾವಣೆಗಳು ಬಂತು. ಈ ಮೂರು ವರ್ಷಗಳಲ್ಲಿ ನಮ್ಮ ಸರ್ಕಾರ ಸ್ಥಳೀಯ ಚುನಾವಣೆಗಳು 3-4 ನಡೆಸಿದೆ. 1993ರಲ್ಲಿ ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್ ಮಸೂದೆಯನ್ನು ನಾವು ಅಂಗೀಕಾರ ಮಾಡಿದರೂ ಕಾಂಗ್ರೆಸ್ ಸರ್ಕಾರದವರು 2-3ವರ್ಷಗಳಾದರೂ ಈ ಚುನಾವಣೆಗಳನ್ನು ಮಾಡಿರಲಿಲ್ಲ. ಅಲ್ಲಿ ಅಧಿಕಾರಿಗಳ ಮುಖಾಂತರ ಜಿಲ್ಲಾ,

ತಾಲ್ಲೂಕುಮಟ್ಟದಲ್ಲಿ ಅಧಿಕಾರವನ್ನು ನಡೆಸುತ್ತಿದ್ದರು. ನಾವು ಅಧಿಕಾರಕ್ಕೆ ಬಂದಮೇಲೆ 2-3 ತಿಂಗಳಲ್ಲಿ ಸ್ಥಳೀಯ ಚುನಾವಣೆಗಳನ್ನು ಮಾಡಿದ್ದೇವೆ. ಈ ಸ್ಥಳೀಯ ಚುನಾವಣೆಗಳನ್ನು ಮಾಡಿ ಸರ್ಕಾರವನ್ನು ರಚನೆ ಮಾಡಿದ್ದೇವೆ. ಅದು ಹೇಗೆ ಮಾಡಿದ್ದೇವೆಂದರೆ ಇದ್ದ ವ್ಯವಸ್ಥೆಯನ್ನು ನಾವು ಮುಂದುವರೆಸಲಿಲ್ಲ. ಇಡೀ ಭಾರತ ದೇಶದ ಇತಿಹಾಸದಲ್ಲಿ ನಿಜವಾದಂತಹ ಸಾಮಾಜಿಕ ನ್ಯಾಯವನ್ನು ಕೊಡಬೇಕು, ನಿಜವಾದ ಹಿಂದುಳಿದವರ್ಗದವರಿಗೆ ಅಧಿಕಾರದಲ್ಲಿ ಪಾಲುಗಾರರನ್ನಾಗಿ ಮಾಡಿದ್ದು, ಇಡೀ ಇಂಡಿಯಾ ದೇಶದಲ್ಲಿ ಎಲ್ಲಾದರೂ ಇದ್ದರೆ ಅದು ಕರ್ನಾಟಕ ರಾಜ್ಯದಲ್ಲೇ ಇರುವಂಥಾದ್ದು. ನಾವು ತಮ್ಮ ಜೀವನದ ಉದ್ದಕ್ಕು ಯಾವುದೇ ಅಧಿಕಾರವನ್ನು ಅನುಭವಿಸದೆ ಇರತಕ್ಕಂಥ ಸಣ್ಣಪುಟ್ಟ ಜಾತಿಗಳಿಗೆ ಮೀಸಲಾತಿಯನ್ನು ಕೊಟ್ಟೆವು. ಅದನ್ನು ಕೊಟ್ಟಿದ್ದರಿಂದ ಇವತ್ತು ರೊಟೇಷನ್ ಸಿಸ್ಟಂನಲ್ಲಿ ನಾಲ್ಕು ಜನ ಪರಿಶಿಷ್ಟಜಾತಿ/ಪರಿಶಿಷ್ಟವರ್ಗದ ಜಿಲ್ಲಾಪಂಚಾಯತ್ ಅಧ್ಯಕ್ಷರು ಇರುತ್ತಾರೆ, ತಾಲ್ಲೂಕು ಪಂಚಾಯತ್ ಅಧ್ಯಕ್ಷರುಗಳಿರುತ್ತಾರೆ, ಉಪಾಧ್ಯಕ್ಷರುಗಳಿರುತ್ತಾರೆ. ಇದರ ಜೊತೆಗೆ ಸದಸ್ಯರುಗಳು ಕೂಡ ಅಷ್ಟೇ ಸಂಖ್ಯೆಯಲ್ಲಿರುತ್ತಾರೆ. ಮತ್ತು ಮಹಿಳೆಯರಿಗೆ ಶೇಕಡ 33ರಷ್ಟು ಮೀಸಲಾತಿ ನೀಡಿ, ಅಧ್ಯಕ್ಷರು, ಉಪಾಧ್ಯಕ್ಷರು ಸ್ಥಾನಗಳಲ್ಲಿ ಮೀಸಲಾತಿಯನ್ನು ನೀಡಿ ಇವತ್ತು ಚುನಾವಣೆಗಳನ್ನು ನಡೆಸಿದ್ದೇವೆ; ಅದರ ವ್ಯವಸ್ಥೆ ಕರ್ನಾಟಕ ರಾಜ್ಯದಲ್ಲಿ ಬಹಳ ಯಶಸ್ವಿಯಾಗಿ ಆಗಿದೆ, ಅದರಿಂದಲೇ ಕಳೆದ ಚುನಾವಣೆಯಲ್ಲಿ ಜನತೆ ನಮ್ಮನ್ನು ಆಶೀರ್ವಾದ ಮಾಡಿದ್ದಾರೆ. ಇನ್ನು-ಈ ವಿವಿಧ ಇಲಾಖೆಗಳಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ನೋಡಿದ್ದೇ ಆದರೆ, ಆಡಳಿತವನ್ನು ಹೇಗೆ ನಡೆಸಿದ್ದೇವೆ ಎನ್ನುವುದನ್ನು ನೋಡಿದ್ದಾದರೆ, ಆಡಳಿತದಲ್ಲಿ ಒಂದು ಬಿಗಿಯಾದಂಥ ವ್ಯವಸ್ಥೆಯನ್ನು ತಂದಿದ್ದೇವೆ. ಎರಡು ವರ್ಷಗಳ ಹಿಂದಿನದ್ದೇ ತೆಗೆದುಕೊಳ್ಳಿ ಪ್ರತಿ ಸರ್ಕಾರ, ವರ್ಗಾವಣೆಯಿಂದಲೇ ಬೀದಿಗಿಳಿಯುವಂಥ ವ್ಯವಸ್ಥೆಯನ್ನು ನೋಡುತ್ತಿದ್ದೇವೆ. ಆದರೆ ನಮ್ಮ ಎರಡು ವರ್ಷದಲ್ಲಿ ಅಷ್ಟು ಹಗುರವಾಗಿ ಯಾರಿಗೂ ಅವಕಾಶ ಕೊಡದೆ ಕಟ್ಟುನಿಟ್ಟಿನ ವರ್ಗಾವಣೆಯ ಒಂದು ವ್ಯವಸ್ಥೆಯನ್ನು ಜಾರಿಗೆ ತಂದು, ಇವತ್ತು ನಮ್ಮ ಆಡಳಿತದಲ್ಲಿ ಒಂದು ಸ್ಥಿರತೆಯನ್ನು ನಾವು ಕಾಣುತ್ತಿದ್ದೇವೆ. ನಾವು ಬಹಳ ಪ್ರಮುಖವಾದ ತೀರ್ಮಾನಗಳನ್ನು ತೆಗೆದುಕೊಂಡಿದ್ದೇವೆ. ಅದು ಜಿಲ್ಲಾ ಪುನರ್ವಿಂಗಡಣೆಯ ಒಂದು ತೀರ್ಮಾನ. ನಮ್ಮ ನಾಡಿನಲ್ಲಿ ಕೇವಲ ಇಪ್ಪತ್ತು ಜಿಲ್ಲೆಗಳಿದ್ದವು, ಒಂದೊಂದು ಜಿಲ್ಲೆ ಎರಡು ಮೂರು ಜಿಲ್ಲೆಗಳಾಗುವಷ್ಟು ದೊಡ್ಡದ್ದಾಗಿದ್ದವು; ಅದು ಬಿಜಾಪುರ ಇರಬಹುದು, ಬೆಳಗಾಂ ಇರಬಹುದು; ಹೀಗೆ ಬೇರೆ ಬೇರೆ ಜಿಲ್ಲೆಗಳಲ್ಲಿ ಸುಗಮವಾಗಿ ಆಡಳಿತವನ್ನು ನಡೆಸಿದಿರುವಂಥ ರೀತಿಯಲ್ಲಿ ದೊಡ್ಡ ಜಿಲ್ಲೆಗಳಾಗಿದ್ದವು. ಆದರೆ ರೈತರಿಗೆ, ಸಾಮಾನ್ಯ ಜನರಿಗೆ ಹತ್ತಿರವಾದ ಸರ್ಕಾರವನ್ನು, ಆಡಳಿತವನ್ನು ತೆಗೆದುಕೊಂಡು ಹೋಗಬೇಕೆನ್ನುವ ದೃಷ್ಟಿಯಿಂದ ಇವತ್ತು ಐತಿಹಾಸಿಕವಾದ ಒಂದು ತೀರ್ಮಾನವನ್ನು ನಮ್ಮ ಮುಖ್ಯಮಂತ್ರಿಗಳು ತೆಗೆದುಕೊಂಡು ಜಿಲ್ಲಾ ಪುನರ್ವಿಂಗಡಣೆ ಮಾಡಿ ಒಂಭತ್ತು ಹೊಸ ಜಿಲ್ಲೆಗಳನ್ನು ರಚಿಸುವ ತೀರ್ಮಾನವನ್ನು ತೆಗೆದುಕೊಂಡು ಈಗಾಗಲೇ ಏಳು

ಜಿಲ್ಲೆಗಳನ್ನು ನಾವು ಅಷ್ಟಿತ್ವಕ್ಕೆ ತಂದಿದ್ದೇವೆ. ಇದರಿಂದ ನಮ್ಮ ಸರ್ಕಾರ ಜನರಿಗೆ ಹತ್ತಿರವಾದ ಆಡಳಿತವನ್ನು ಕೊಡುವುದರಲ್ಲಿ ಬಹಳ ಯಶಸ್ವಿಯಾಗಿದೆ ಎಂದು ನಾನು ಬಹಳ ಸಂತೋಷದಿಂದ ಹೇಳುತ್ತೇನೆ. ವಿದ್ಯುತ್ ಬಗ್ಗೆ ಯಾವಾಗಲೂ ಹಾಹಾಕಾರವಾಗಿದೆ; ತೊಂದರೆಯಾಗಿದೆ, ವಿದ್ಯುತ್ ಕಡಿತವಾಗಿದೆ ಎಂದು ತಾವು ವಿಧಾನ ಸಭೆಯಲ್ಲಿ ಹೇಳುತ್ತಿದ್ದೀರಿ. ನಿಜ, ಈ ಒಂದು ಸಮಸ್ಯೆಯನ್ನು ನಾವು ಹುಟ್ಟು ಹಾಕಿದ್ದಲ್ಲ, ಇದು ಬಹಳ ವರ್ಷಗಳಿಂದ ಇದರ ಬಗ್ಗೆ ಯಾರೂ ಚಿಂತನೆ ಮಾಡದೆ ಬೆಳೆದು ಬಂದಿದೆ. ಆದರೆ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಮೇಲೆ, ಇದಕ್ಕೆ ಶಾಶ್ವತವಾದ ಪರಿಹಾರವನ್ನು ಕಂಡುಹಿಡಿಯಬೇಕೆಂದು ನಾವು, ಕೆಲವು ಕಟ್ಟುನಿಟ್ಟಿನ ಕಾರ್ಯಕ್ರಮಗಳನ್ನು, ಕೆಲವು ಯೋಜನೆಗಳನ್ನು ತಯಾರು ಮಾಡಿ ಮಂಜೂರಾತಿ ಮಾಡಿರುವುದು ತಮಗೆಲ್ಲಾ ಗೊತ್ತಿರುವ ವಿಚಾರ. ನಮ್ಮ ರಾಜ್ಯಕ್ಕೆ ಸುಮಾರು ಹನ್ನೊಂದು ಸಾವಿರ ಮೆಗಾವ್ಯಾಟ್ ವಿದ್ಯುತ್ ಬೇಕಾಗುತ್ತದೆ. ಆದರೆ ಇವತ್ತು ಉತ್ಪತ್ತಿಯಾಗುತ್ತಿರುವುದು ಕೇವಲ ಮೂರುವರೆ ಸಾವಿರ ಮೆಗಾವ್ಯಾಟ್ ವಿದ್ಯುತ್. ಇನ್ನು ಕೂಡ ಆರೂವರೆ ಸಾವಿರ ಮೆಗಾವ್ಯಾಟ್ ವಿದ್ಯುತ್ ಬೇಕಾಗುತ್ತದೆ. ಈ ವಿದ್ಯುತ್ ಉತ್ಪತ್ತಿಯನ್ನು ಕೇವಲ ಒಂದೆರಡು ತಿಂಗಳಲ್ಲಿ ಮಾಡುವಂಥದ್ದಲ್ಲ. ಇದಕ್ಕಾಗಿ ಕೆಲವೊಂದು ಯೋಜನೆಗಳನ್ನು ತಯಾರು ಮಾಡಬೇಕು, ಮಂಜೂರಾತಿ ಮಾಡಿಸಬೇಕು. ಆ ದೃಷ್ಟಿಯಿಂದ ಇವತ್ತು ಬಹಳ ಪ್ರತಿಷ್ಠಿತವಾದ ಕೊಚೆಂಟ್ರಿಕ್ಸ್ ವಿದ್ಯುತ್ ಉತ್ಪಾದನೆ ಯೋಜನೆಯನ್ನು, ಸುಮಾರು ಒಂದು ಸಾವಿರ ಮೆಗಾವ್ಯಾಟ್ ವಿದ್ಯುತ್ ಉತ್ಪಾದಿಸುವ ಯೋಜನೆಯನ್ನು ಮಂಜೂರಾತಿ ಮಾಡಿಸಿಕೊಂಡಿದ್ದೇವೆ, ಆ ಕೆಲಸವನ್ನು ಇವತ್ತು ಪ್ರಾರಂಭ ಮಾಡುತ್ತಿದ್ದೇವೆ. ಮತ್ತ ರಾಯಚೂರಿನಲ್ಲಿ ಈಗಾಗಲೇ ಮೂರು ವಿದ್ಯುತ್ ಉತ್ಪಾದನಾ ಘಟಕಗಳು ಕಾರ್ಯಾಚರಣೆಯಲ್ಲಿವೆ. ನಾಲ್ಕು ಮತ್ತು ಐದನೇ ಘಟಕಗಳನ್ನು ಪ್ರಾರಂಭ ಮಾಡುವುದಕ್ಕೋಸ್ಕರ ಸುಮಾರು ಸಾವಿರದ ಐನೂರ ಮೂವತ್ತಾರು ಕೋಟಿ ರೂಪಾಯಿಗಳ ವೆಚ್ಚದಲ್ಲಿ ಯೋಜನೆಯನ್ನು ಮಂಜೂರಾತಿ ಮಾಡಿಸಿದ್ದೇವೆ. ಇದರಿಂದ ಸುಮಾರು ನಾನೂರ ಇಪ್ಪತ್ತು ಮೆಗಾವ್ಯಾಟ್ಸ್ ವಿದ್ಯುಚ್ಛಕ್ತಿ ಇಷ್ಟರಲ್ಲೇ ಉತ್ಪತ್ತಿಯಾಗುವ ಕಾಲ ಬರುತ್ತಿದೆ. ಅದರ ಜೊತೆಗೆ ಬಿಡದಿಯಲ್ಲಿ, ಸುಮಾರು ಏಳುನೂರು ಮೂವತ್ತಾಲ್ಕು ಕೋಟಿ ರೂಪಾಯಿಗಳ ವೆಚ್ಚದಲ್ಲಿ ಸಾವಿರದ ಇನ್ನೂರು ಮೆಗಾವ್ಯಾಟ್ಸ್ ವಿದ್ಯುತ್ ಉತ್ಪಾದನೆ ಮಾಡುವ ಒಂದು ಯೋಜನೆಯನ್ನು ನಾವು ಮಂಜೂರಾತಿ ಮಾಡಿ ಅದರ ಕೆಲಸ ಈಗಾಗಲೇ ಪ್ರಾರಂಭವಾಗುತ್ತಿದೆ. ಇದರ ಜೊತೆಗೆ ಈಗ ಇರುವ ವ್ಯವಸ್ಥೆಯಲ್ಲಿ ವಿದ್ಯುತ್ ಪೋಲಾಗದಂತೆ ಒಳ್ಳೆಯ ರೀತಿಯಲ್ಲಿ ವಿತರಣೆ ಮಾಡುವುದಕ್ಕೆ ಸಿಸ್ಟಂ ಇಂಪ್ರೂಮೆಂಟ್‌ಗೋಸ್ಕರ ಸುಮಾರು ಆರುನೂರು ಕೋಟಿ ರೂಪಾಯಿಗಳ ವೆಚ್ಚದಲ್ಲಿ ನಾವು ಯೋಜನೆಗಳನ್ನು ಹಾಕಿಕೊಂಡಿದ್ದೇವೆ. ಇನ್ನು ಕೇವಲ ಎರಡು ವರ್ಷದೊಳಗೆ, ನಾವು ಮುಂದಿನ ಚುನಾವಣೆಗೆ ಹೋಗುವುದಕ್ಕಿಂತ ಮೊದಲು ನಾವು ಈ ವಿದ್ಯುತ್ ಸಮಸ್ಯೆಯನ್ನು ಪರಿಹಾರ ಮಾಡುತ್ತೇವೆ ಎನ್ನುವ ಒಂದು ಭರವಸೆಯನ್ನು ನಮ್ಮ ಸರ್ಕಾರ ಕೊಡುವುದಕ್ಕೆ ಇಚ್ಛೆಪಡುತ್ತಿದೆ. ಇನ್ನು ಮನೆಗಳ ವಿತರಣೆಯ ಬಗ್ಗೆ

ಹೇಳುವುದಾದರೆ, ನಾವು ಮೂರು ವರ್ಷದಲ್ಲಿ ಎಷ್ಟು ನಿವೇಶನರಹಿತರಿಗೆ, ಮನೆ ಇಲ್ಲದವರಿಗೆ, ಮನೆ ವಿತರಣೆಗೆ ಸಮರೋಪಾದಿಯಲ್ಲಿ ಆ ಕೆಲಸವನ್ನು ಹಮ್ಮಿಕೊಂಡಿದ್ದೇವೆ. ಈ ಕಾಂಗ್ರೆಸ್ ಸರ್ಕಾರದ ಐದು ವರ್ಷಗಳಲ್ಲಿ ಅವರು ವಿತರಣೆ ಮಾಡಿರುವ ಮನೆಗಳ ಸಂಖ್ಯೆ ಕೇವಲ ಅರವತ್ತೆರಡು ಸಾವಿರ. ಆದರೆ ಇವತ್ತು ನಾವು ಕೇವಲ ಮೂರು ವರ್ಷದಲ್ಲಿ ಇಂದಿರಾ ಆವಾಸ್ ಇರಬಹುದು, ಅಂಬೇಡ್ಕರ್ ಯೋಜನೆ ಇರಬಹುದು, ಆಶ್ರಯ ಯೋಜನೆಯಲ್ಲಿ ಇರಬಹುದು, ಇವುಗಳಲ್ಲಿ ಸುಮಾರು ಒಂದೂವರೆ ಲಕ್ಷ ಮನೆಗಳನ್ನು ಹಂಚಿರುವುದು, ಕರ್ನಾಟಕ ರಾಜ್ಯದಲ್ಲಿ ಐತಿಹಾಸಿಕ ದಾಖಲೆ ಎಂದು ಹೇಳುವುದಕ್ಕೆ ನಾನು ಇಚ್ಛಿಪಡುತ್ತಿದ್ದೇನೆ. ಇದರ ಜೊತೆಗೆ ನಿವೇಶನಗಳನ್ನು ವಿತರಣೆ ಮಾಡುವಂಥ ಕಾರ್ಯಕ್ರಮವನ್ನು ತ್ವರಿತಗತಿಯಲ್ಲಿ ನಾವು ಮಾಡುತ್ತಿದ್ದೇವೆ. ಪ್ರತಿಷ್ಠಿತವಾದ ಕಾರ್ಯಕ್ರಮಗಳಾದ ರಾಷ್ಟ್ರೀಯ ಕ್ರೀಡೆಯನ್ನು ನಡೆಸಬೇಕೆಂದು ಇದ್ದರೂ ಕೂಡ ಯಾವ ಸರ್ಕಾರವು ಮುಂದಾಗಿರಲಿಲ್ಲ. ನಮ್ಮ ಸರ್ಕಾರ ಈ ಒಂದು ತೀರ್ಮಾನವನ್ನು ತೆಗೆದುಕೊಂಡು, ಮೇ ತಿಂಗಳಲ್ಲಿ ರಾಷ್ಟ್ರೀಯ ಕ್ರೀಡೆಯನ್ನು ಬಹಳ ವೈಭವಯುತವಾಗಿ ನಡೆಸಿ, ಇದರಿಂದ ಬೆಂಗಳೂರಿನಲ್ಲಿರಬಹುದು, ಮೈಸೂರಿನಲ್ಲಿರಬಹುದು, ಇನ್‌ಫ್ರಾಸ್ಟ್ರಕ್ಚರ್ ಸೃಷ್ಟಿ ಮಾಡಿ, ಈ ಯೋಜನೆಯ ಮುಖಾಂತರ ರಾಜ್ಯದಲ್ಲಿ ಕೋಟ್ಯಾಂತರ ರೂಪಾಯಿಗಳ ಕ್ರೀಡಾಂಗಣದ ಆಧುನೀಕರಣ, ವಸತಿ ಸಮುಚ್ಛಯ ಇತ್ಯಾದಿಗಳನ್ನು ನಮ್ಮ ರಾಜ್ಯ ಪಡೆದುಕೊಳ್ಳುವುದಕ್ಕೆ ಅನುಕೂಲವಾಗಿದೆ ಎಂದು ಹೇಳುವುದಕ್ಕೆ ನಾನು ಈ ಸಂದರ್ಭದಲ್ಲಿ ಇಚ್ಛಿಪಡುತ್ತೇನೆ. ಮತ್ತೆ, ನೀರಾವರಿ ಬಗ್ಗೆ ಹೇಳುವುದಾದರೆ, ನೀರಾವರಿಗೆ ನಮ್ಮ ಸರ್ಕಾರ ಖರ್ಚು ಮಾಡಿರುವುದನ್ನು ಹೇಳುವುದಾದರೆ, ಅದೊಂದೇ ವಿಚಾರದಲ್ಲಿ ನಮ್ಮ ವಿರೋಧಪಕ್ಷದ ಸದಸ್ಯರುಗಳು ನಮ್ಮನ್ನು ಮೆಚ್ಚುತ್ತಾರೆಂದು ನಾನು ತಿಳಿದುಕೊಳ್ಳುತ್ತೇನೆ. ನೀರಾವರಿಗೆ ನಾವು ಎಷ್ಟು ಆದ್ಯತೆಯನ್ನು ಕೊಟ್ಟಿದ್ದೇವೆ, ಎಷ್ಟು ಹಣವನ್ನು ಖರ್ಚು ಮಾಡಿದ್ದೇವೆ ಎನ್ನುವ ಬಗ್ಗೆ ನಾವು ಈಗಾಗಲೇ ನಮ್ಮ ಪ್ರಗತಿಯ ಪಕ್ಷಿನೋಟವನ್ನು ತಮ್ಮ ಮುಂದೆ ಇಟ್ಟಿದ್ದೇವೆ. ಈ ನಮ್ಮ ಮಂಡ್ಯ, ಮೈಸೂರು ಭಾಗದಲ್ಲಿ ವಿಶೇಶ್ವರಯ್ಯ ನಾಲೆಯನ್ನೇ ತೆಗೆದುಕೊಳ್ಳಿ. ಆಧುನೀಕರಣದ ಬಗ್ಗೆ 1977-78ರಿಂದ ಆ ನಾಲೆಯನ್ನು ಆಧುನೀಕರಣ ಮಾಡಬೇಕೆಂದು ತೀರ್ಮಾನವನ್ನು ತೆಗೆದುಕೊಂಡಿದ್ದರು, ಯಾವುದೇ ಸರ್ಕಾರ ಅದಕ್ಕೆ ಸರಿಯಾದ ಹಣವನ್ನು ಇಟ್ಟಿರಲಿಲ್ಲ. ನಾವು ಇವತ್ತು ಅರವತ್ತು ಕೋಟಿ ರೂಪಾಯಿಗಳನ್ನು ವಿಶ್ವೇಶ್ವರಯ್ಯ ನಾಲೆಯ ಆಧುನೀಕರಣಕ್ಕೆ ಖರ್ಚು ಮಾಡುತ್ತಿದ್ದೇವೆ. ಮತ್ತೆ, ಕೃಷ್ಣಾ ಭಾಗ್ಯ ಜಲನಿಗಮವನ್ನು ಸ್ಥಾಪನೆ ಮಾಡಿ 1995-96 ರಿಂದ ಸುಮಾರು ಏಳುನೂರು ಕೋಟಿ ರೂಪಾಯಿಗಳನ್ನು ಸಂಗ್ರಹಣೆ ಮಾಡಿದ್ದೇವೆ. ಆಲಮಟ್ಟಿ ಜಲಾಶಯ ಹಾಗೂ ಪುನರ್ ವಸತಿ ಕಾರ್ಯಕ್ರಮಗಳಿಗೆ ಹೆಚ್ಚಿನ ಹಣವನ್ನು ನಾವು ಕೊಟ್ಟಿದ್ದೇವೆ ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗಾಗಿ ಗಂಗಾ ಕಲ್ಯಾಣ ಎಂಬ ಯೋಜನೆಯನ್ನು ಜಾರಿಗೆ ತಂದಿದ್ದೇವೆ. ಈ ತರಹದ ಯೋಜನೆಯನ್ನು ಜಾರಿಗೆ ತಂದಿರುವುದು ನಮ್ಮ

ಸರ್ಕಾರವೊಂದೇ. ಮಾನ್ಯ ದೇವೇಗೌಡರು ಪ್ರಧಾನ ಮಂತ್ರಿಗಳಾಗಿದ್ದಾಗ ಇದನ್ನು ಒಂದು ರಾಷ್ಟ್ರೀಯ ಕಾರ್ಯಕ್ರಮವನ್ನಾಗಿ ವಿಸ್ತರಣೆ ಮಾಡಿದರು. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗಾಗಿ ಇರುವ ವಿಶೇಷ ಘಟಕ ಯೋಜನೆಯಡಿಯಲ್ಲಿ ಹಿಂದೆ ಪ್ರತಿ ವರ್ಷವೂ ಸುಮಾರು 300-400 ಕೋಟಿ ರೂ.ಗಳು ಸರಿಯಾಗಿ ಖರ್ಚಾಗುತ್ತಿರಲಿಲ್ಲ ಅದನ್ನೆಲ್ಲಾ ನಾವು ಕ್ರೋಢೀಕರಿಸಿ ಆದ್ಯತೆಯನ್ನು ಗೊತ್ತು ಮಾಡಿ ವ್ಯವಸ್ಥಿತವಾಗಿ ಹಣವನ್ನು ಖರ್ಚು ಮಾಡಿದ್ದೇವೆ. ಪರಿಶಿಷ್ಟ ಜಾತಿಯವರಿಗೆ ಕೇವಲ ಸಣ್ಣ ಪುಟ್ಟ ಸವಲತ್ತುಗಳನ್ನಷ್ಟೇ ಕೊಡುವುದು ಮುಖ್ಯವಲ್ಲ. ಅವನಿಗೆ ನೇಗಿಲು ಕೊಟ್ಟರೆ ಆತ ಅದನ್ನು ಮಾರಿಕೊಳ್ಳುತ್ತಾನೆ, ಕುರಿಗಳನ್ನು ಅಥವಾ ಮತ್ತೇನನ್ನೋ ಕೊಟ್ಟರೆ ಆತ ಅದನ್ನು ಮಾರಿಕೊಳ್ಳುತ್ತಾನೆ, ಎಂಬ ಪರಿಸ್ಥಿತಿ ಹಿಂದೆ ಇತ್ತು. ಬಡವರನ್ನು ಬಡವರನ್ನಾಗಿಯೇ ಉಳಿಸುವಂತಹ ಕಾರ್ಯಕ್ರಮಗಳು ಹಿಂದೆ ಇದ್ದವು. ಅದನ್ನೆಲ್ಲಾ ನಮ್ಮ ಸರ್ಕಾರ ಬಂದ ಮೇಲೆ ರದ್ದು ಮಾಡಿ ಆದ್ಯತೆಯ ಮೇರೆಗೆ ನೀರಾವರಿ, ಶಿಕ್ಷಣ ಮತ್ತು ವಸತಿ, ಈ ಮೂರು ಕ್ಷೇತ್ರಗಳಿಗೆ ಹೆಚ್ಚಿನ ಹಣವನ್ನು ನಾವು ಬಿಡುಗಡೆ ಮಾಡಿದ್ದೇವೆ. ಪರಿಶಿಷ್ಟ ಜಾತಿಯ ಕೇವಲ 2-3 ಎಕರೆಗಳಷ್ಟು ಜಮೀನು ಹೊಂದಿರತಕ್ಕವರಿಗೆ ನೀರಾವರಿ ಸೌಲಭ್ಯಗಳನ್ನು ಒದಗಿಸಬೇಕೆಂದು ಹೇಳಿ, ಇವತ್ತು ರಾಜ್ಯದಲ್ಲಿ ಸುಮಾರು 9-10 ಸಾವಿರ ಬೋರ್‌ವೆಲ್‌ಗಳನ್ನು ನಾವು ತೋಡಿಸಿದ್ದೇವೆ. ಯಾರಿಗೆ 2-3 ಎಕರೆ ಜಮೀನಿದ್ದು, ನೀರಿನ ಸೌಕರ್ಯ ಇರಲಿಲ್ಲವೋ ಅಂತಹವರಿಗೆ ನಮ್ಮ ಸರ್ಕಾರ ಗಂಗಾಕಲ್ಯಾಣ ಯೋಜನೆಯಡಿ ಬೋರ್‌ವೆಲ್‌ಗಳನ್ನು ತೆಗೆಸಿ ಕೊಟ್ಟಿದೆ. ಬೋರ್‌ವೆಲ್‌ಗಳನ್ನು ತೆಗೆಸುವುದಲ್ಲದೆ ಬೇರೆ ಬೇರೆ ಇಲಾಖೆಗಳಿಂದ ಅವನಿಗೆ ತೆಂಗಿನ ಸಸಿ, ರೇಷ್ಮೆ ಇಲಾಖೆಯಿಂದ ಕೆಲವು ಸವಲತ್ತುಗಳನ್ನು ಒದಗಿಸಿ ಅವನು ವ್ಯವಸಾಯವನ್ನು ಮಾಡಲು ಅವಕಾಶ ಮಾಡಿಕೊಟ್ಟು, ಆತ ನಿಜವಾಗಿ ಶಾಶ್ವತವಾಗಿ ಬಡತನವನ್ನು ನಿವಾರಣೆ ಮಾಡಲು ಮತ್ತು ಸಮಾಜದಲ್ಲಿ ಗೌರವಯುತವಾಗಿ ಬಾಳುವಂತಹ ಒಂದು ವ್ಯವಸ್ಥೆಯನ್ನು ನಾವು ಮಾಡಿದ್ದೇವೆ. ಶಿಕ್ಷಣ ಇಲಾಖೆಯಲ್ಲಿನ ಪ್ರಗತಿ ಬಗ್ಗೆ ಹೇಳುವುದಾದರೆ, ಕಳೆದ ಎಷ್ಟೋ ವರ್ಷಗಳಿಂದ ಶಿಕ್ಷಣ ಇಲಾಖೆಯಲ್ಲಿ ಶಿಕ್ಷಕರನ್ನು ನೇಮಕಾತಿ ಮಾಡಿರಲಿಲ್ಲ. ನಾವು ಅಧಿಕಾರಕ್ಕೆ ಬಂದ ಕೇವಲ ಎರಡೇ ವರ್ಷಗಳಲ್ಲಿ ಸುಮಾರು 30 ಸಾವಿರ ಉಪಾಧ್ಯಾಯರನ್ನು ನೇಮಕ ಮಾಡಿಕೊಂಡಿದ್ದೇವೆ. ಒಟ್ಟಾರೆ ಕಳೆದ ಮೂರು ವರ್ಷಗಳಲ್ಲಿ ಎಲ್ಲಾ ಇಲಾಖೆಗಳಲ್ಲೂ ಸೇರಿ ಒಟ್ಟಾರೆ 70-72 ಸಾವಿರ ಜನರನ್ನು ನೇಮಕಾತಿ ಮಾಡತಕ್ಕ ಕೆಲಸವನ್ನು ನಮ್ಮ ಸರ್ಕಾರ ಮಾಡಿದೆ. ಆರೋಗ್ಯ ಇಲಾಖೆಯಲ್ಲಿ ನಮ್ಮ ಸರ್ಕಾರ ಸುಮಾರು 800 ಜನ ವೈದ್ಯರನ್ನು ನೇಮಕಾತಿ ಮಾಡಿ, ಯಾವುದೇ ಆಸ್ಪತ್ರೆಗಳಲ್ಲಿ ವೈದ್ಯರುಗಳಿಲ್ಲ ಎಂಬ ದೂರುಗಳು ಬಾರದಂತಹ ವ್ಯವಸ್ಥೆಯನ್ನು ಮಾಡಿದ್ದೇವೆ. ಹಾಗೆಯೇ ನಮ್ಮ ಸರ್ಕಾರ ಉಪನ್ಯಾಸಕರುಗಳ ನೇಮಕಾತಿಯನ್ನೂ ಸಹಾ ಮಾಡಿದೆ. ನಾವು ಎಲ್ಲಾ ರೀತಿಯ ಪ್ರಯತ್ನಗಳನ್ನು ಮಾಡಿ ಎಲ್ಲೆಲ್ಲಿ ಸಾರ್ವಜನಿಕರಿಗೆ ಅನ್ಯಾಯವಾಗುತ್ತಿತ್ತೋ, ತೊಂದರೆಯಾಗುತ್ತಿತ್ತೋ ಅಂತಹ ಕಡೆಗಳಲ್ಲಿ ಅನುಕೂಲ ಮಾಡಿದ್ದೇವೆ. ಎಲ್ಲೆಲ್ಲಿ ಹುದ್ದೆಗಳು ಖಾಲಿ ಇದ್ದವೋ ಅಂತಹ ಕಡೆ

ಅವುಗಳನ್ನು ಆದ್ಯತೆಯ ಮೇರೆಗೆ ತುಂಬಿದ್ದೇವೆ. ಬೇರೆ ಬೇರೆ ಹೊರ ರಾಷ್ಟ್ರಗಳಿಂದ ಅಂತರರಾಷ್ಟ್ರೀಯ ಮಟ್ಟದಲ್ಲಿ ಹಣವನ್ನು ಪಡೆದುಕೊಳ್ಳತಕ್ಕದ್ದರಲ್ಲೂ ಕೂಡ ನಾವು ಮುಂದೆ ಇದ್ದೇವೆ. ವಿಶ್ವಬ್ಯಾಂಕ್‌ನಿಂದ ಸಹಾಯ ಪಡೆಯುವುದರಲ್ಲಿ ನಾವು ಯಶಸ್ವಿಯಾಗಿದ್ದೇವೆ. ಆರೋಗ್ಯ ಇಲಾಖೆಯಲ್ಲಿ ತಾಲ್ಲೂಕು ಮಟ್ಟದ, ಜಿಲ್ಲಾ ಮಟ್ಟದ ಸುಮಾರು 200 ಆಸ್ಪತ್ರೆಗಳನ್ನು ಮೇಲ್ದರ್ಜೆಗೆ ಏರಿಸಲು ಒಂದು ಯೋಜನೆಯನ್ನು ತಯಾರು ಮಾಡಿ ಅದಕ್ಕೆ ವಿಶ್ವಬ್ಯಾಂಕಿನ ಮಂಜೂರಾತಿಯನ್ನು ದೊರಕಿಸಿಕೊಂಡು ಅವರಿಂದ ಸುಮಾರು 550 ಕೋಟಿ ರೂ.ಗಳನ್ನು ನಾವು ಸಹಾಯವಾಗಿ ಪಡೆದುಕೊಂಡಿದ್ದೇವೆ. ಮಾನ್ಯ ದೇವೇಗೌಡರು ಪ್ರಧಾನ ಮಂತ್ರಿಗಳಾದ ನಂತರ ನಮ್ಮ ರಾಜ್ಯ ಸರ್ಕಾರವು ಗ್ರಾಮೀಣ ಮತ್ತು ಜಿಲ್ಲಾ ಮಟ್ಟದ ರಸ್ತೆಗಳ ರಿಪೇರಿಗಾಗಿ ಅವುಗಳನ್ನು ಅಭಿವೃದ್ಧಿ ಪಡಿಸುವುದಕ್ಕೋಸ್ಕರ ಸುಮಾರು 250 ಕೋಟಿ ರೂ.ಗಳನ್ನು ನಬಾರ್ಡ್‌ನಿಂದ ಪಡೆದುಕೊಂಡಿದೆ. ರಾಷ್ಟ್ರೀಯ ಹೆದ್ದಾರಿಗಳನ್ನು ಅಭಿವೃದ್ಧಿ ಮಾಡುವ ಒಂದು ದೃಷ್ಟಿಯಿಂದ 900 ಕೋಟಿ ರೂ.ಗಳ ಒಂದು ಯೋಜನೆಯನ್ನು ತಯಾರು ಮಾಡಿ ಅದಕ್ಕೆ ಮಂಜೂರಾತಿ ನೀಡಿ ಅದನ್ನು ಇವತ್ತು ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದೇವೆ. ಆ ಹಣದಿಂದ ಸೇತುವೆಗಳು ಮತ್ತು ಹೆದ್ದಾರಿಗಳ ಅಭಿವೃದ್ಧಿ ಕೆಲಸಗಳನ್ನು ನಾವು ಕೈಗೊಂಡು ಇನ್ನು 2-3 ವರ್ಷಗಳಲ್ಲಿ ನಮ್ಮ ಲೋಕೋಪಯೋಗಿ ಇಲಾಖೆಯಲ್ಲಿ ಹೆಚ್ಚಿನ ಒಂದು ಸಾಧನೆಯನ್ನು ನಾವು ಸಾಧಿಸುತ್ತೇವೆ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಇನ್ನು ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ ಅನೇಕ ಅಭಿವೃದ್ಧಿ ಯೋಜನೆಗಳನ್ನು ನಾವು ಕೈಗೆತ್ತಿಕೊಂಡಿದ್ದೇವೆ. ಮಾನ್ಯ ಎಂ.ಪಿ.ಪ್ರಕಾಶರವರು ಮೂರು ವರ್ಷಗಳಿಂದ ಈ ಒಂದು ಖಾತೆಯನ್ನು ಚೆನ್ನಾಗಿ ನಡೆಸಿಕೊಂಡು ಬಂದಿದ್ದಾರೆ. ನಿಮಗೆ ಒಂದೇ ಒಂದು ಉದಾಹರಣೆ ನೀಡುವುದಾದರೆ, 1994ರಿಂದ 1997ರವರೆಗೆ ಬಡತನ ನಿರ್ಮೂಲ ಇತ್ಯಾದಿ ವಿವಿಧ ಕೇಂದ್ರದ ಯೋಜನೆಗಳಿಂದ ನಮ್ಮ ರಾಜ್ಯ ಸರ್ಕಾರಕ್ಕೆ ಬಂದು ಖರ್ಚು ಮಾಡಿರತಕ್ಕಂತಹ ಹಣ ಒಟ್ಟು 2,747 ಕೋಟಿ ರೂ.ಗಳಾಗಿವೆ. ನಮ್ಮ ಸರ್ಕಾರ ಬರುವುದಕ್ಕೆ ಮೊದಲು ಕೇಂದ್ರದಿಂದ ಬರುವ ಹಣದಲ್ಲಿ ಶೇಕಡ 82ರಷ್ಟನ್ನು ಮಾತ್ರ ಉಪಯೋಗಿಸಿಕೊಳ್ಳಲಾಗುತ್ತಿತ್ತು. ಆದರೆ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಹಿಂದಿನ ಸರ್ಕಾರಗಳನ್ನು ಮೀರಿಸಿ ಕೇಂದ್ರದಿಂದ ವಿವಿಧ ಯೋಜನೆಗಳಡಿ ಬರತಕ್ಕ ಹಣದಲ್ಲಿ ಶೇಕಡ 98-99ರಷ್ಟು, ಕೆಲವಡೆ ಶೇಕಡ 100ರಷ್ಟು ಹಣವನ್ನು ನಾವು ಸಂಪೂರ್ಣವಾಗಿ ಉಪಯೋಗ ಮಾಡಿಕೊಂಡು ಅದರ ಒಂದು ಅನುಕೂಲವನ್ನು ನಮ್ಮ ರಾಜ್ಯದ ಜನತೆಗೆ ತಲುಪಿಸಿದ್ದೇವೆ ಎನ್ನತಕ್ಕ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಇನ್ನು ಕುಡಿಯುವ ನೀರಿನ ಬಗ್ಗೆ ಹೇಳುವುದಾದರೆ, ಕುಡಿಯುವ ನೀರಿನ ಬಗ್ಗೆ ನಮ್ಮ ಸರ್ಕಾರ ಯಾವಾಗಲೂ ಹೆಚ್ಚಿನ ಆದ್ಯತೆಯನ್ನು ಕೊಟ್ಟಿದೆ. ಕೇವಲ ಈ ಸರ್ಕಾರವೊಂದೇ ಅಲ್ಲ, ನಮ್ಮ ಸರ್ಕಾರ ಹಿಂದೆ 1983ರಲ್ಲಿ ಅಧಿಕಾರದಲ್ಲಿದ್ದಾಗ ದಿವಂಗತ ನಜೀರ್ ಸಾಬ್‌ರವರು ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರಾಗಿದ್ದಾಗ ಇಡೀ ಭಾರತದಲ್ಲೇ ಕುಡಿಯುವ ನೀರನ್ನು ಒದಗಿಸುವಲ್ಲಿ ಒಂದು

ದಾಖಲೆಯನ್ನು ಸ್ಥಾಪಿಸಿರತಕ್ಕದ್ದು ಮಾನ್ಯ ಅಧ್ಯಕ್ಷರಿಗೂ ಸಹ ಗೊತ್ತಿದೆ. ಈಗಲೂ ಸಹ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ 1995-96ನೇ ಸಾಲಿನಲ್ಲಿ ಸುಮಾರು 160 ಕೋಟಿ ರೂ.ಗಳು, 1996-97ನೇ ಸಾಲಿನಲ್ಲಿ 236 ಕೋಟಿ ರೂ.ಗಳನ್ನು ಖರ್ಚು ಮಾಡಿ ಸುಮಾರು 800 ಕೊಳವೆ ನೀರು ಸರಬರಾಜು ಯೋಜನೆಯನ್ನು ನಮ್ಮ ರಾಜ್ಯದಲ್ಲಿ ನಾವು ಮಂಜೂರಾತಿ ಮಾಡಿಸಿದ್ದೇವೆ. 1238 ಕಿರು ನೀರು ಸರಬರಾಜು ಯೋಜನೆಗಳನ್ನು ನಾವು ಪೂರ್ಣ ಮಾಡಿದ್ದೇವೆ. ಸುಮಾರು 6300 ಕೊಳವೆ ಬಾವಿಗಳನ್ನು ನಮ್ಮ ಕರ್ನಾಟಕ ರಾಜ್ಯದಲ್ಲಿ ಕಳೆದ 2-3 ವರ್ಷಗಳಲ್ಲಿ ನಾವು ತೆಗೆಸಿರತಕ್ಕದ್ದನ್ನು ತಾವು ಗಮನಿಸಿರಬಹುದು. 1200 ಗ್ರಾಮಗಳಿಗೆ ಕುಡಿಯುವ ನೀರು ಮತ್ತು ನೈರ್ಮಲ್ಯ ಸೌಲಭ್ಯ ಒದಗಿಸುವ ಸಲುವಾಗಿ 450 ಕೋಟಿ ರೂ.ವೆಚ್ಚದ ವಿಶ್ವಬ್ಯಾಂಕಿನ ನೆರವಿನ ಯೋಜನೆಯನ್ನು ಪ್ರಾರಂಭ ಮಾಡಿದ್ದೇವೆ. ಜೂನ್ 1997ರವರೆಗೆ ಸುಮಾರು 245 ಹಳ್ಳಿಗಳಿಗೆ ಈ ಸೌಲಭ್ಯವನ್ನು ಒದಗಿಸಿಕೊಟ್ಟಿದ್ದೇವೆ. ಗ್ರಾಮ ನೈರ್ಮಲ್ಯ ಯೋಜನೆಯೊಂದನ್ನು ನೆದರ್‌ಲ್ಯಾಂಡ್ಸ್‌ನಿಂದ ಮಂಜೂರಾತಿ ಮಾಡಿಸಿಕೊಂಡಿರುತ್ತೇವೆ. ಡೆನ್ಮಾರ್ಕ್‌ನಿಂದ ಸುಮಾರು 39 ಕೋಟಿ ರೂ.ಗಳನ್ನು ಇದಕ್ಕಾಗಿ ನಾವು ಪಡೆದಿದ್ದೇವೆ. ಸ್ವಸ್ತಿ ಗ್ರಾಮ ಯೋಜನೆಗೆ ನಾವು ಈ ಹಣವನ್ನು ಪಡೆದುಕೊಂಡು ಕೆಲಸ ಮಾಡುತ್ತಿದ್ದೇವೆ. ಹೀಗೆ ಹತ್ತಾರು ಯೋಜನೆಗಳನ್ನು ನಮ್ಮ ಸರ್ಕಾರ ತಾಲ್ಲೂಕು ಪಂಚಾಯಿತಿಗಳು ಹಾಗೂ ಜಿಲ್ಲಾ ಪಂಚಾಯಿತಿಗಳ ಮೂಲಕ ಗ್ರಾಮೀಣ ಅಭಿವೃದ್ಧಿ ಇಲಾಖೆ ವತಿಯಿಂದ ಜಾರಿಗೊಳಿಸಿರತಕ್ಕದ್ದನ್ನು ತಾವು ನೋಡಬಹುದಾಗಿದೆ. ನಮ್ಮ ರಾಜ್ಯದಲ್ಲಿ ಹೊಸ ಹೊಸ ಕೈಗಾರಿಕೆಗಳನ್ನು ಪ್ರಾರಂಭ ಮಾಡುವ ಸಲುವಾಗಿ ನಾವು ಕಳೆದ ಮೂರು ವರ್ಷಗಳಲ್ಲಿ ಸುಮಾರು 5400 ಕೋಟಿ ರೂ.ಗಳ ವಿದೇಶಿ ಬಂಡವಾಳವನ್ನು ಆಕರ್ಷಣೆ ಮಾಡಿದ್ದೇವೆ. ಇದರಿಂದಾಗಿ ಉದ್ಯೋಗಾವಕಾಶಗಳು ಹೆಚ್ಚುವುದರ ಜೊತೆಗೆ ಬೇರೆ ಬೇರೆ ಉತ್ಪಾದನೆಗಳನ್ನು ಮಾಡತಕ್ಕ ಅವಕಾಶವನ್ನು, ಔದ್ಯಮೀಕರಣ ಆಗುವ ದಿಕ್ಕಿನಲ್ಲಿ ನಮ್ಮ ಸರ್ಕಾರ ಕೆಲಸ ಮಾಡಿದೆ ಎಂಬುದನ್ನು ನಾನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಇನ್ನು 1997-98ನೇ ಸಾಲಿನಲ್ಲಿ ಯೋಜಿತ ಬಂಡವಾಳ ಹೂಡಿಕೆ ಸಲುವಾಗಿ 16 ಬೃಹತ್ ಕೈಗಾರಿಕೆಗಳಿಗೆ ನಾವು ಮಂಜೂರಾತಿ ಕೊಟ್ಟಿದ್ದೇವೆ. ಸುಮಾರು ಆರು ಸಾವಿರ ಕೋಟಿ ರೂ.ಗಳಷ್ಟು ವಿದೇಶೀ ಬಂಡವಾಳವನ್ನು ಆಟೋಮೊಬೈಲ್ಸ್, ಸ್ವೀಡನ್‌ನ ವೋಲ್ವೋ ಕಂಪನಿ, ಟೋಯೋಟಾ, ಕಿರ್ಲೋಸ್ಕರ್ ಮೋಟಾರ್ ಕಾರ್ಪೊರೇಷನ್, ಟಾಟಾ ಲೋಕೋಮೋಟಿವ್ ಕಂಪನಿ, ಸುಜುಕಿ ಮುಂತಾದ ದೊಡ್ಡ ದೊಡ್ಡ ಕಾರ್ಖಾನೆಗಳಿಂದ ಪಡೆದುಕೊಂಡು ಇವತ್ತು ಒಂದೆರಡು ವರ್ಷಗಳಲ್ಲಿ ನಮ್ಮ ರಾಜ್ಯದ ಔದ್ಯಮೀಕರಣ ನಾಗಾಲೋಟದಲ್ಲಿ ಬೆಳೆಯತಕ್ಕ ಒಂದು ಅವಕಾಶವನ್ನು ನಾವು ಕಲ್ಪಿಸಿಕೊಂಡಿದ್ದೇವೆ. ಪ್ರಪಂಚದ ಬೇರೆ ಬೇರೆ ಭಾಗಗಳಲ್ಲಿನ ಹೊಸ ಹೊಸ ಟೆಕ್ನಾಲಜಿಗಳನ್ನು ನಾವು ನಮ್ಮ ರಾಜ್ಯದಲ್ಲಿ ಅಳವಡಿಸಿಕೊಂಡು ಇತರ ಎಲ್ಲಾ ರಾಜ್ಯಗಳಿಗಿಂತ ಮಾದರಿ ಆಗಿದ್ದೇವೆ.

ಇನ್ನು ನಮ್ಮ ಶಿಕ್ಷಣ ಇಲಾಖೆಯಲ್ಲಿ ಶಿಕ್ಷಕರ ನೇಮಕ ಮಾಡಿರುವುದರ ಜೊತೆಗೆ ಬೇರೆ ಬೇರೆ ಯೋಜನೆಗಳನ್ನು ನಾವು ತೆಗೆದುಕೊಂಡಿರುವುದನ್ನು ನಾನು ಆಗಲೇ ಹೇಳಿದ್ದೇನೆ. ವಿಶ್ವಬ್ಯಾಂಕ್ ನೆರವಿನ ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮದ 2ನೇ ಹಂತದಲ್ಲಿ ಇನ್ನೂ 7 ಜಿಲ್ಲೆಗಳನ್ನು ಅದಕ್ಕೆ ಸೇರಿಸುತ್ತಿದ್ದೇವೆ. ಈ ಯೋಜನೆಯಲ್ಲಿ ವಿಶ್ವಬ್ಯಾಂಕಿನಿಂದ ಒಟ್ಟು ಸುಮಾರು 240 ಕೋಟಿ ರೂಪಾಯಿಗಳನ್ನು ನಾವು ಪಡೆದುಕೊಂಡಿದ್ದೇವೆ. ಈ ಯೋಜನೆ ಕೇವಲ 5 ಜಿಲ್ಲೆಗಳಲ್ಲಿ ಇದ್ದು ಅದರ ಜೊತೆಗೆ ಪುನಃ 7 ಜಿಲ್ಲೆಗಳನ್ನು ಸೇರಿಸುತ್ತಿದ್ದೇವೆ. ನೇತಾಜಿ ಸುಭಾಷ್‌ಚಂದ್ರಬೋಸ್ ಅವರ ಜನ್ಮಶತಾಬ್ದಿ ಆಂಗವಾಗಿ 224 ಕ್ಷೇತ್ರದಲ್ಲೂ ಸಹ ಒಂದೊಂದು ಶಾಲೆ, ಪ್ರೌಢಶಾಲೆಯ ಕಟ್ಟಡಗಳನ್ನು ನಾವು ಕಟ್ಟಿಸುವ ಯೋಜನೆಯನ್ನು ಹಾಕಿಕೊಂಡಿದ್ದೇವೆ. ಇದು ಈಗಾಗಲೇ ತಮಗೆಲ್ಲಾ ಗೊತ್ತಿರಬಹುದು ಮತ್ತು ಯಾವ ಯಾವ ಗ್ರಾಮದಲ್ಲಿ ಈ ಯೋಜನೆಯಲ್ಲಿ ಪ್ರೌಢಶಾಲೆಗಳನ್ನು ಕಟ್ಟಿಸಬೇಕು ಎನ್ನುವಂಥದ್ದಕ್ಕೆ ಸಂಬಂಧಪಟ್ಟ ಕ್ಷೇತ್ರದ ಮಾನ್ಯ ಸದಸ್ಯರುಗಳೂ ಸಹ ಸೂಚನೆ ಕೊಟ್ಟಿರಬಹುದು. ದಿವಂಗತ ಭಾರತರತ್ನ ಸರ್.ಎಂ.ವಿಶ್ವೇಶ್ವರಯ್ಯನವರ ಹೆಸರಿನಲ್ಲಿ ಒಂದು ತಾಂತ್ರಿಕ ವಿಶ್ವವಿದ್ಯಾಲಯವನ್ನು ಮಾಡಬೇಕೆಂದು ನಾನು ಹಿಂದೆ ಮಂತ್ರಿಯಾಗಿದ್ದಾಗ ಅದಕ್ಕೆ ಅನುಮೋದನೆ ಕೊಟ್ಟು, ಆ ವಿಶ್ವವಿದ್ಯಾಲಯ ಏಪ್ರಿಲ್ ಒಂದನೇ ತಾರೀಖಿನಿಂದ ಬೆಳಗಾಂನಲ್ಲಿ ಜಾರಿಗೆ ಬರುತ್ತಿದೆ. ಇನ್ನು ಪ್ರೊಫೆಷನಲ್ ಕೋರ್ಸ್‌ಗಳಾದ ಇಂಜಿನಿಯರಿಂಗ್, ಮೆಡಿಕಲ್ ಮತ್ತು ಡೆಂಟಲ್ ಮುಂತಾದವುಗಳಿಗೆ ಪ್ರವೇಶವಕಾಶವನ್ನು ಮಾಡತಕ್ಕಂಥ ಒಂದು ವ್ಯವಸ್ಥೆಯನ್ನು ಬಹಳ ಕಟ್ಟುನಿಟ್ಟಾಗಿ, ವ್ಯವಸ್ಥಿತವಾಗಿ ಮಾಡಿ ಇವತ್ತು ನಮ್ಮ ಸರ್ಕಾರ ಇಡೀ ರಾಜ್ಯದಲ್ಲಿ ಮೆಚ್ಚುಗೆಯನ್ನು ಪಡೆದುಕೊಂಡಿದೆ. ಇದರಲ್ಲಿ ಯಾವುದೇ ರೀತಿಯ ಗೊಂದಲ 2 ವರ್ಷಗಳಿಂದ ಆಗಿಲ್ಲವೆನ್ನುವುದನ್ನು ತಾವೆಲ್ಲಾ ಬಲ್ಲಿರಿ. ಆ ಒಂದು ಕೆಲಸವನ್ನು ನಮ್ಮ ಸರ್ಕಾರ ಯಶಸ್ವಿಯಾಗಿ ಮಾಡಿದೆ. ಹಾಗೆಯೇ ಕಂಪ್ಯೂಟರ್ ಶಿಕ್ಷಣವನ್ನು ಬಹಳ ವ್ಯವಸ್ಥಿತವಾಗಿ ಮಾಡುತ್ತಿದೆ. ಇನ್ನು ಸಾರಿಗೆ ಇಲಾಖೆ ಬಗ್ಗೆ ಹೇಳುವುದಾದರೆ, ಈ ಸಾರಿಗೆ ಇಲಾಖೆಯನ್ನು ಒಳ್ಳೆಯ ರೀತಿಯಲ್ಲಿ ಸುಧಾರಣೆ ಮಾಡುವುದು ಅಷ್ಟು ಸುಲಭದ ಕೆಲಸವಲ್ಲ. ಇದು ತಮಗೆಲ್ಲಾ ಗೊತ್ತಿದೆ. ಈ ಸಾರಿಗೆ ವ್ಯವಸ್ಥೆ ಬಹಳ ಕೆಟ್ಟುಹೋಗಿದೆ. ಅದನ್ನು ನಮ್ಮ ಸಾರಿಗೆ ಸಚಿವರು ಬಹಳ ಶ್ರಮದಿಂದ ಯಾವ ರೀತಿಯಾಗಿ ಒಂದು ಸಿಸ್ಟಮನ್ನು ಇಂಪ್ರೂವ್ ಮಾಡಬಹುದು, ಯಾವ ರೀತಿ ನಮ್ಮ ಸಾರ್ವಜನಿಕರಿಗೆ ಅದರ ಅನುಕೂಲವನ್ನು ಪಡೆಯಬಹುದು ಎನ್ನುವ ಯೋಚನೆ ಮಾಡಿ ಅವುಗಳಿಗೆ ಬೇರೆ ಬೇರೆ ರೂಪುಗಳನ್ನು ಕೊಟ್ಟು 3 ಕಾರ್ಪೊರೇಷನ್‌ಗಳಾಗಿ ಮಾಡಿದ್ದಾರೆ. ಮತ್ತು ಬೆಂಗಳೂರು, ಹುಬ್ಬಳ್ಳಿಯಲ್ಲಿ ಹೊಸದಾಗಿ ಇದನ್ನು ವಿಭಜನೆ ಮಾಡಿ ಯಶಸ್ವಿಯಾಗಿ ಕೆಲಸವನ್ನು ಮಾಡತಕ್ಕಂಥ ರೀತಿಯಲ್ಲಿ ತೀರ್ಮಾನಗಳನ್ನು ತೆಗೆದುಕೊಂಡಿದ್ದಾರೆ. ಆದ್ದರಿಂದ ಮುಂದಿನ ದಿನಗಳಲ್ಲಿ ಇನ್ನೂ ಸುಲಭವಾಗಿ ಸಾರ್ವಜನಿಕರು ಪ್ರಯಾಣ ಮಾಡುವುದಕ್ಕೆ ಆಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು ಕೊಳಚೆ ಪ್ರದೇಶದ ನಿರ್ಮೂಲನೆ ಬಗ್ಗೆ ಹೇಳುವುದಾದರೆ, ಶ್ರೀಮಾನ್ ದೇವೇಗೌಡರು

ಪ್ರಧಾನಮಂತ್ರಿಗಳಾಗಿದ್ದಾಗ ಕೇಂದ್ರದಿಂದ ಹೆಚ್ಚಿನ ಹಣವನ್ನು ನಮ್ಮ ಸರ್ಕಾರಕ್ಕೆ ಕೊಟ್ಟಿದ್ದರಿಂದ ನಮ್ಮ ಸಣ್ಣಪುಟ್ಟ ಪಟ್ಟಣ ಪ್ರದೇಶಗಳ ಸ್ಲಂನ ಅಭಿವೃದ್ಧಿಗೋಸ್ಕರ ಇವತ್ತು ಹಣವನ್ನು ಬಿಡುಗಡೆ ಮಾಡಿಸಿದ್ದೇವೆ.

(ಉಪಾಧ್ಯಕ್ಷರು (ಶ್ರೀ ಚಂದ್ರಶೇಖರ್ ಮಲ್ಲಿಕಾರ್ಜುನ ಮಾಮನಿರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.)

ಹೀಗೆ ಪ್ರತಿಯೊಂದು ಕ್ಷೇತ್ರದಲ್ಲೂ ಸಹ ಅಭಿವೃದ್ಧಿ ಯೋಜನೆಗಳನ್ನು ಹಾಕಿಕೊಂಡಿದ್ದೇವೆ. ಆಹಾರ ವಿತರಣೆಗೋಸ್ಕರ ಸಬ್ಸಿಡಿ ಕೊಟ್ಟಿರುವುದನ್ನು ನಾನು ಈಗಾಗಲೇ ಹೇಳಿದ್ದೇನೆ. ಈ ಯೋಜನೆಗಳಿಗೆ 1997-98ನೇ ಸಾಲಿನಲ್ಲಿ ಸುಮಾರು 2,700 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದರೆ ಈ ವರ್ಷ ಸುಮಾರು 4,500 ಕೋಟಿ ರೂಪಾಯಿಗಳ ಹೆಚ್ಚಳವನ್ನು ಮಾಡಿದ್ದೇವೆ. ಅಂದರೆ ಕಳೆದ 3 ವರ್ಷಕ್ಕೆ ಹೋಲಿಸಿದರೆ ಈ ಹಣ ಹಿಂದಿನ ಎರಡುಪಟ್ಟು ಜಾಸ್ತಿ ಇದೆ. ಇಷ್ಟೊಂದು ಆರ್ಥಿಕ ಸ್ಥಿರತೆಯನ್ನು ತಂದು ನಮ್ಮ ಸರ್ಕಾರ 3 ವರ್ಷಗಳ ಕಾಲ ಹೆಚ್ಚಿನ ಪ್ರಗತಿಯನ್ನು ಸಾಧಿಸಿ ಕೆಲಸ ಮಾಡುತ್ತಿದೆ. ನಮ್ಮ ಜನತೆ ಅಷ್ಟೊಂದು ಆಶಾದಾಯಕವಾಗಿ ಲೋಕಸಭಾ ಚುನಾವಣೆಯಲ್ಲಿ ನಮಗೆ ಬೆಂಬಲವನ್ನು ಕೊಡದಿದ್ದರೂ ಸಹ ಜನತೆ ನಮ್ಮನ್ನು ರಾಜ್ಯಸರ್ಕಾರದ ಮಟ್ಟಿಗೆ ಕೆಲಸ ಮಾಡಿರುವುದನ್ನು ಜನತೆ ಮೆಚ್ಚಿಕೊಂಡಿದ್ದಾರೆ. ಸ್ಥಳೀಯ ಚುನಾವಣೆಗಳಲ್ಲಿ ನಮಗೆ ಬೆಂಬಲವನ್ನು ಸೂಚಿಸಿದ್ದಾರೆ. ಒಂದು ಉದಾಹರಣೆ ಹೇಳುವುದಾದರೆ, 1984ರಲ್ಲಿ ಲೋಕಸಭೆ ಚುನಾವಣೆ ಬಂತು. ಅದು ತಮಗೆಲ್ಲಾ ಗೊತ್ತಿದೆ. ಆ ಲೋಕಸಭೆ ಚುನಾವಣೆಯಲ್ಲಿ ಜನತೆ ನಮ್ಮನ್ನು ಸೋಲಿಸಿದರು. ತಕ್ಷಣ 2-3 ತಿಂಗಳಿನಲ್ಲಿ ನಾವು ವಿಧಾನಸಭಾ ಚುನಾವಣೆಯಲ್ಲಿ ಜನತೆ ಮುಂದೆ ಹೋದೆವು. ಆಗ ಪುನಃ ಜನತೆ ರಾಜ್ಯಕ್ಕೆ ಜನತಾದಳ ಸರ್ಕಾರ ಇರಬೇಕೆಂದು ಹೇಳಿ ಸುಮಾರು 139 ಸೀಟುಗಳನ್ನು ಕೊಟ್ಟು ನಮ್ಮನ್ನು ಗೆಲ್ಲಿಸಿಕೊಟ್ಟರು. ಆ ಒಂದು ಉದಾಹರಣೆಯನ್ನೇ ನಮ್ಮ ಕಣ್ಣಮುಂದೆ ಇಟ್ಟುಕೊಂಡರೆ ಈ ಚುನಾವಣೆ ಫಲಿತಾಂಶ ನಮ್ಮ ಸರ್ಕಾರದ ವಿರುದ್ಧ ಅಲ್ಲ ಎಂದು ನಾವು ತಿಳಿದುಕೊಳ್ಳಬಹುದು. ಅದೇ ಬೇರೆ ವಿಚಾರಕ್ಕೆ ಚುನಾವಣೆ ಆಗಿದೆ. ನಮ್ಮ ಸರ್ಕಾರಕ್ಕೆ ಇನ್ನೂ 2 ವರ್ಷಗಳ ಕಾಲಾವಕಾಶವಿದೆ. ನಮ್ಮ ಸರ್ಕಾರ ಕೆಲವು ತಿದ್ದುಪಡಿಗಳನ್ನು ಮಾಡಿಕೊಳ್ಳಬೇಕಾಗುತ್ತದೆ. ಕೆಲವು ಸುಧಾರಣೆಗಳನ್ನು ಮಾಡಿಕೊಳ್ಳಬೇಕಾಗುತ್ತದೆ, ಆ ರಾಜಕೀಯದಲ್ಲಿ ಕೆಲವೊಂದು ಹುರುಪನ್ನು ತರಬೇಕಾಗುತ್ತದೆ. ಅದನ್ನು ನಾನು ಮೆಚ್ಚಿಕೊಳ್ಳುತ್ತೇನೆ. ಆ ರೀತಿ ಇಂಪ್ರೂವ್ ಮಾಡಿಕೊಳ್ಳುವುದಕ್ಕೆ ಅವಾಶವಿದ್ದೇ ಇದೆ. ಆದರೆ ಕಳೆದ 3 ವರ್ಷಗಳಲ್ಲಿ ನಮ್ಮ ಸರ್ಕಾರದ ಯಾವುದೇ ಮಂತ್ರಿಗಳು ಒಂದಾದರೂ ಭ್ರಷ್ಟಾಚಾರದ ಆರೋಪವಾಗಲೀ, ಅಥವಾ ಯಾವುದಾದರೂ ಅವ್ಯವಹಾರದ ಆರೋಪವಾಗಲೀ ಇವರ ಮೇಲೆ ಬಂದಿಲ್ಲವೆಂದು ನಾನು ಹೆಮ್ಮೆಯಿಂದ ಹೇಳುತ್ತೇನೆ. ಸಣ್ಣಪುಟ್ಟ ಕೆಲವು ವಿಚಾರಗಳನ್ನು ಪತ್ರಿಕೆಗಳು ಬರೆದುಕೊಂಡಿರಬಹುದು. ಆದರೆ ಆತ್ಮತೃಪ್ತಿಯಿಂದ ನಮ್ಮ

ಸರ್ಕಾರದ ಮಂತ್ರಿಗಳು ಕೆಲಸ ಮಾಡಿದ್ದಾರೆ. ನಮ್ಮ ಮಾನ್ಯ ಮುಖ್ಯಮಂತ್ರಿಗಳ ಮೇಲೆ ಸಹ ಯಾವುದೇ ತರಹದ ಭ್ರಷ್ಟಾಚಾರದ ಆರೋಪ ಇಲ್ಲ. ಆದ್ದರಿಂದ ಒಳ್ಳೆಯ ಕೆಲಸವನ್ನು ಮಾಡುವುದಕ್ಕೆ ನಮ್ಮ ಸರ್ಕಾರಕ್ಕೆ ಅವಕಾಶವನ್ನು ಕೊಟ್ಟಿರತಕ್ಕಂಥ ಜನರ ಋಣವನ್ನು ನಾವು ತೀರಿಸುತ್ತಿದ್ದೇವೆ. ಇನ್ನೂ ಎರಡು ವರ್ಷಗಳ ಕಾಲ ಅದನ್ನು ಮುಂದುವರೆಸಿಕೊಂಡು ಹೋಗುತ್ತೇವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಅನೇಕ ವಿಚಾರಗಳಿದ್ದು, ನಮ್ಮ ಸಾಧನೆಗಳನ್ನು ಹೇಳುವುದಾದರೆ ಅದಕ್ಕೆ ಬಹಳಷ್ಟು ಸಮಯ ಬೇಕಾಗುತ್ತದೆ. ಆದರೆ ನಾನು ಹೆಚ್ಚಿಗೆ ವೇಳೆಯನ್ನು ತೆಗೆದುಕೊಳ್ಳುವುದಕ್ಕೆ ಇಚ್ಛೆಪಡುವುದಿಲ್ಲ. ಸರ್ಕಾರದ ಸಾಧನೆಗಳನ್ನು ಹಿಂದಿನ ಸಭೆಗಳಲ್ಲಿ, ವಿಧಾನಸಭೆಗಳಲ್ಲಿ, ಜನಗಳ ಮುಂದೆ ನಮ್ಮ ಚುನಾವಣೆಗಳ ಸಂದರ್ಭದಲ್ಲಿ ಹೀಗೆ ಅನೇಕ ಸಂದರ್ಭಗಳಲ್ಲಿ ಹೇಳಿದ್ದೇವೆ. ಒಟ್ಟಿನಲ್ಲಿ ಈ ನಮ್ಮ ಸರ್ಕಾರಕ್ಕೆ ಜನತೆಯು ಬೆಂಬಲವನ್ನು ಕೊಡುತ್ತಾರೆ ಎನ್ನುವ ಆಶಾಭಾವನೆಯಿಂದ ಮತ್ತು ನಮ್ಮ ಮಾನ್ಯ ರಾಜ್ಯಪಾಲರು ನಿನ್ನೆಯ ದಿವಸ ಮಾಡಿರತಕ್ಕಂಥ ಭಾಷಣಕ್ಕೆ ವಂದನಾರ್ಪಣೆಯನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಚಂದ್ರಶೇಖರ ಸದಾಶಿವ ನಾಯಕ್ (ಗೋಕಾಕ್): ಮಾನ್ಯ ಉಪಾಧ್ಯಕ್ಷರೇ, ಲೋಕಸಭಾ ಚುನಾವಣೆ ಮುಗಿಸಿ ಪ್ರಪ್ರಥಮವಾಗಿ ಈ ಸದನದಲ್ಲಿ ನಾವೆಲ್ಲಾ ಸೇರಿದ್ದೇವೆ. ಈಗಾಗಲೇ ಹಿರಿಯ ಶಾಸಕರಾದಂಥ ಶ್ರೀಮಾನ್ ಬಿ.ಸೋಮಶೇಖರ್ ಅವರು ಚುನಾವಣೆ ಬಗ್ಗೆ ಹೇಳಿದರು. ಮತ್ತು ಜನರ ತೀರ್ಪು ಏನು ಆಯಿತು ಎನ್ನುವುದನ್ನು ಬಹಳ ಮಾರ್ಮಿಕವಾಗಿ ಹೇಳಿದರು. ಮುಖ್ಯವಾಗಿ ರಾಜ್ಯ ಸುಭಿಕ್ಷೆಯಾಗಿರಬೇಕಾದರೆ ಅಲ್ಲಿ ಏನು ಇರುತ್ತದೆ ಎನ್ನುವುದನ್ನು ಒಂದು ಕಡೆ 'ಚಾಣಕ್ಯ' ಹೇಳುತ್ತಾನೆ. 'ಎಲ್ಲಿ ಶಾಂತಿ ಇರುತ್ತಿದೋ ಅಲ್ಲಿ ಸುಭಿಕ್ಷೆ ಇರುತ್ತದೆ' ಅಂದರೆ ಕಳೆದ 3 ವರ್ಷಗಳಲ್ಲಿ ನಮ್ಮ ಜನತಾದಳ ಸರ್ಕಾರದಲ್ಲಿ ರಾಜ್ಯದ ಯಾವುದೇ ಸ್ಥಳದಲ್ಲಿ ಯಾವುದೇ ಅಹಿತಕರವಾದ ಘಟನೆ ನಡೆದಂಥ ಉದಾಹರಣೆ ಇಲ್ಲ. ಇದಕ್ಕೆ ಒಂದು ಉದಾಹರಣೆಯಾಗಿ ಹೇಳುವುದಾದರೆ ಎಷ್ಟೋ ದಿವಸಗಳಿಂದ ಹುಬ್ಬಳ್ಳಿ ಈದ್ಗಾ ಮೈದಾನದಲ್ಲಿ ಕೇವಲ ಧ್ವಜವಂದನೆ ಸಲುವಾಗಿ ಎಷ್ಟೋ ಜನರ ಜೀವ ಹೋಗುತ್ತಿತ್ತು. ಆ ಒಂದು ಸಂದರ್ಭದಲ್ಲಿ ಹಿಂದೆ ಇದ್ದಂಥ ಕೆಲವೊಂದು ಶಕ್ತಿಗಳು ಅವುಗಳಿಗೆ ಪ್ರೇರಣೆಯಾಗಿ ಕೆಲಸ ಮಾಡುತ್ತಿದ್ದವು. ಅದನ್ನು ಯಾವ ರೀತಿಯಲ್ಲಿ ನಮ್ಮ ಸರ್ಕಾರ ಬಗೆಹರಿಸಿತು ಎನ್ನುವಂಥದ್ದು ನೋಡಿದರೆ ನಿಜವಾಗಿಯೂ ಸಹ ಹೆಮ್ಮೆಯನ್ನು ಪಡುವಂತಹ ವಿಷಯವಾಗಿದೆ. ಧ್ವಜವಂದನೆಯಾದಂತಹ ಸಮಯವನ್ನು ನೋಡಿದರೆ ಎಲ್ಲಾ ಕಡೆಗಳಲ್ಲಿಯೂ ಯಾವ ರೀತಿಯಲ್ಲಿ ಸುಲಲಿತವಾಗಿ ಧ್ವಜವಂದನೆ ನಡೆಯುತ್ತದೆಯೋ ಅದೇ ರೀತಿಯಲ್ಲಿ ನಡೆದು ಹೊಯಿತು. ಯಾರೂ ಕೂಡ ಇದರ ಬಗ್ಗೆ ಮಾತನಾಡಲಿಲ್ಲ. ಆಮೇಲೆ ಓವರ್ ಡ್ರಾಫ್ಟ್ ಎನ್ನುವಂಥದ್ದನ್ನು ಎಲ್ಲಾ ಹಿಂದೆ ಇದ್ದ ಸರ್ಕಾರಗಳು ಮಾಡಿಕೊಳ್ಳುತ್ತಾ ಬಂದಿತ್ತು, ಸರ್ಕಾರಕ್ಕೆ ಬೇಕಾದಂತಹ ಅಭಿವೃದ್ಧಿ

ಕೆಲಸಗಳಿಗೆ ಹಣವನ್ನು ಸಾಲದ ರೂಪದಲ್ಲಿ ತರತಕ್ಕಂತಹ ವಿಚಾರ ಎಲ್ಲಾ ಸರ್ಕಾರದಲ್ಲಿ ಇದ್ದರೂ ಸಹ ನಮ್ಮ ಸರ್ಕಾರ ಹಾಸಿಗೆ ಇದ್ದಷ್ಟು ಕಾಲು ಚಾಚಬೇಕು ಎನ್ನುವಂತಹ ಗಾದೆಯ ಮಾತಿನೊಳಗೆ ನಮ್ಮಲ್ಲಿರತಕ್ಕಂತಹ ಆರ್ಥಿಕತೆಯ ಪ್ರಬಲತೆ ಎನ್ನುವಂತಹ ವಿಚಾರದಲ್ಲಿ ಜನತಾದಳ ಸರ್ಕಾರ ಈ ಒಂದು ಓವರ್ ಡ್ರಾಫ್ಟ್ ದಿಕ್ಕನ್ನು ಬದಲಾಯಿಸಿ ಸರ್ಕಾರದ ಮೇಲೆ ಇರತಕ್ಕಂತಹ ಸಾಲದ ಹೊರೆಯನ್ನು ದೂರ ಮಾಡಿ ಅಭಿವೃದ್ಧಿಗೆ ಬೇಕಾದಂತಹ ಕೆಲಸಗಳನ್ನು ಯೋಜನಾ ರೂಪದಲ್ಲಿ ಅವುಗಳನ್ನು ಅನುಷ್ಠಾನಗೊಳಿಸುವುದಕ್ಕೆ ಪ್ರಯತ್ನ ಮಾಡಿದ್ದನ್ನು ನೋಡಿದರೆ ಅದು ನಮಗೆಲ್ಲಾ ಹೆಮ್ಮೆಯನ್ನು ತರತಕ್ಕಂತಹ ವಿಷಯ. ಈಗ ನಡೆದ ಲೋಕಸಭಾ ಚುನಾವಣೆಯ ಒಂದು ತೀರ್ಪನ್ನು ನೋಡಿದರೆ, ಅನೇಕ ವಿರೋಧ ಪಕ್ಷದ ಹಿರಿಯರು ನಮ್ಮ ಸರ್ಕಾರದ ವಿರುದ್ಧ ಜನತೆಯು ತೀರ್ಪನ್ನು ನೀಡಿದ್ದಾರೆಂದು ಹೇಳಬಹುದು. ಆದರೆ ಕಳೆದ ಮೂರು ವರ್ಷದಲ್ಲಿ ಅಧಿಕಾರ ವಿಕೇಂದ್ರಿಕರಣ ಸಲುವಾಗಿ ಹಾಕಿಕೊಂಡಂತಹ ಹೆಜ್ಜೆ ಜನತಾದಳ ಸರ್ಕಾರದ ದಿಟ್ಟ ನಿರ್ಣಯ. ತಾಲ್ಲೂಕು ಪಂಚಾಯ್ತಿ ಇರಲಿ, ಜಿಲ್ಲಾ ಪಂಚಾಯ್ತಿ ಇರಲಿ, ಮುನಿಸಿಪಾಲಿಟಿ ಇರಲಿ, ಎಪಿಎಂಸಿ ಇರಲಿ, ಕಳೆದ ಲೋಕಸಭಾ ಚುನಾವಣೆಯಲ್ಲಿ ಇರಲಿ, ವಿಧಾನ ಸಭಾ ಚುನಾವಣೆಯಲ್ಲಿರಲಿ, ವಿಧಾನ ಪರಿಷತ್ತಿನ ಚುನಾವಣೆಯಲ್ಲಿ ಇರಲಿ ಇವುಗಳ ತೀರ್ಪನ್ನು ನೋಡಿದರೆ ಜನತಾದಳ ಸರ್ಕಾರ ಮಾಡಿದಂತಹ ಸಾಧನೆಗಳಿಗೆ ಅವರು ಕೊಟ್ಟಂತಹ ಮರ್ಯಾದೆ ಎನ್ನುವಂತಹ ಮಾತನ್ನು ಇಲ್ಲಿ ಹೇಳಿದರೆ ಅದು ತಪ್ಪಾಗಲಾರದು. ಅಂದಾಗ ಅಧಿಕಾರ ವಿಕೇಂದ್ರಿಕರಣದ ಒಂದು ಮೂಲ ಹೆಜ್ಜೆಯಾಗಿ ಸ್ಥಿರ ಸರ್ಕಾರದಂತಹ ಜನತಾದಳ ಸರ್ಕಾರಕ್ಕೆ ನಾವು ಬೆಂಬಲವನ್ನು ಕೊಟ್ಟು ಇಡೀ ರಾಜ್ಯದಲ್ಲಿರತಕ್ಕಂತಹ ಜನತೆಗೆ ಅವಕಾಶವನ್ನು ಕೊಟ್ಟಂತಹ ಈ ನಮ್ಮ ಸರ್ಕಾರ ನಮ್ಮಲ್ಲಿ ಇರಲಿ, ನಮ್ಮ ತೀರ್ಪು ಏನಾದರೂ ಇದ್ದರೂ ಸಹ ಜನತಾದಳ ಸರ್ಕಾರದ ಪಠವಾಗಿ ಇರಲಿ ಎನ್ನುವಂತಹ ಮಾತನ್ನು ಎತ್ತಿ ಹಿಡಿದು ಸುಮಾರಾಗಿ ಎಲ್ಲಾ ಕಡೆ ಬಹುಮತಕೊಟ್ಟು ನಮ್ಮ ಸರ್ಕಾರಕ್ಕೆ ಬೆಂಬಲವನ್ನು ಸೂಚಿಸಿದ್ದಾರೆ. ಈ ಲೋಕಸಭಾ ಚುನಾವಣೆಯ ಒಂದು ಉದಾಹರಣೆಯನ್ನು ನೋಡಿದರೆ ನನಗನ್ನಿಸುತ್ತದೆ ಮನೆಯೊಳಗಿದ್ದಂತಹ ಒಬ್ಬ ಹಿರಿಯ ಪಂಚಾಯ್ತಿಯ ಚುನಾವಣೆಯಲ್ಲಿ ಏನಾದರೂ ಸೋತು ಹೋದರೆ ಆ ಮನತದ ಹಿರಿಯತನವನ್ನು ಬಿಡಬೇಕೇನು? ಈ ವಿಚಾರ ಜನ ಸಾಮಾನ್ಯರಲ್ಲಿರತಕ್ಕಂತಹ ವಿಚಾರ ಏನು ಎನ್ನುವಂಥದ್ದನ್ನು ಇಲ್ಲಿ ನೆನಪಿಸಿಕೊಂಡರೆ, ನಮಗೆ ಸ್ಥಿರ ಸರ್ಕಾರಬೇಕು. ಏಕೆಂದರೆ ಕಳೆದ ಲೋಕಸಭಾ ಚುನಾವಣೆಯಲ್ಲಿ ಸಂಯುಕ್ತ ರಂಗ ಸರ್ಕಾರ, ಸರ್ಕಾರವನ್ನು ರಚನೆ ಮಾಡಿತು, ಅದಕ್ಕೆ ಕಾಂಗ್ರೆಸ್ ಪಕ್ಷದ ಒಂದು ಬೆಂಬಲ ಸಿಕ್ಕಿತು, ಅದು ಯಾವಾಗ ಹಿಂದಕ್ಕೆ ಬೆಂಬಲವನ್ನು ತೆಗೆದುಕೊಳ್ಳುತ್ತದೋ, ಸರ್ಕಾರ ಯಾವಾಗ ಬಿದ್ದು ಹೋಗುತ್ತದೊ ಎನ್ನುವಂತಹ ವಿಚಾರದೊಳಗೆ ಸುಮಾರಾಗಿ ಎರಡು ವರ್ಷ ಸರ್ಕಾರವನ್ನು ನಡೆಸಿ ಸರ್ಕಾರ ಬಿದ್ದು ಹೋಯಿತು, ಅದಕ್ಕೆ ಇಂತಹ ಸರ್ಕಾರ ಇರಬಾರದು ಒಂದು ಸ್ಥಿರ ಸರ್ಕಾರ ಕೇಂದ್ರದಲ್ಲಿರಬೇಕು ಕೇಂದ್ರದಲ್ಲಿ ಸ್ಥಿರ ಸರ್ಕಾರ ಇದ್ದುದ್ದೇ ಆದರೆ ಹೊರ ದೇಶಗಳಿಂದ

ಸಿಗತಕ್ಕಂತಹ ಸೌಲಭ್ಯಗಳು, ವಿದೇಶಿ ವಿನಿಮಯದಲ್ಲಿರತಕ್ಕಂತಹ ಒಂದು ಮೌಲ್ಯತೆಯನ್ನು ಎತ್ತಿ ಹಿಡಿಯುವ ಸಲುವಾಗಿ ಜನಸಮಾನ್ಯರಲ್ಲಿ ಮೂಡಿದಂತಹ ಭಾವನೆ ಏನೆಂದರೆ ನಮಗೆ ಸ್ಥಿರ ಸರ್ಕಾರ ಬೇಕು ಇದು ರಾಜ್ಯ ಮಟ್ಟಕ್ಕೆ ಅಲ್ಲ. ಕೇಂದ್ರ ಮಟ್ಟಕ್ಕೆ ಬೇಕಾದಂತಹ ಒಂದು ಸರ್ಕಾರ. ಸಮ್ಮಿಶ್ರ ಸರ್ಕಾರ ಏನಾದರೂ ಅಧಿಕಾರಕ್ಕೆ ಬಂದಿದ್ದೇ ಆದರೆ ಇದರಿಂದ ಜನಸಾಮಾನ್ಯರಿಗೆ ಹೊರೆಯಾಗುತ್ತದೆ ಎನ್ನುವಂತಹ ಭಾವನೆಯೊಳಗೆ ಲೋಕಸಭಾ ಚುನಾವಣೆಯಲ್ಲಿ ಒಕ್ಕೊರಲಿನಿಂದ ತಮ್ಮ ತೀರ್ಪನ್ನು ಕೊಟ್ಟಿದ್ದಾರೆ. ಈ ವಿಷಯದೊಳಗೆ ನಮ್ಮ ಕರ್ನಾಟಕ ಸರ್ಕಾರದಲ್ಲಿ ಜನತಾ ದಳದ ಆಡಳಿತದ ವಿರುದ್ಧ ಎನ್ನುವಂತಹ ಮಾತನ್ನು ಎತ್ತಿದ್ದೇ ಆದರೆ ಅದು ಒಂದು ತಪ್ಪು ಕಲ್ಪನೆ ಎನ್ನುವಂತಹ ಮಾತನ್ನು ಇಲ್ಲಿ ಒತ್ತಿ ಹೇಳಬೇಕಾಗುತ್ತದೆ. ನಮ್ಮ ಸರ್ಕಾರ ಮಾಡಿದಂತಹ ಸಾಧನೆ ಏನು? ಹಾಕಿಕೊಂಡಂತಹ ಯೋಜನೆಗಳು ಏನು? ಅವುಗಳನ್ನು ಅನುಷ್ಠಾನಕ್ಕೆ ತರಲಿಕ್ಕೆ ಕಂಡುಕೊಂಡಂತಹ ಪರಿಹಾರದ ಉಪಾಯಗಳೇನು? ಆರ್ಥಿಕ ಒಂದು ಭದ್ರತೆ ಏನು ಎನ್ನತಕ್ಕಂತಹ ವಿಚಾರವನ್ನು ಮಾಡಿದಾಗ ಕಳೆದ ಮೂರು ವರ್ಷಗಳಲ್ಲಿ ಚಾಣಕ್ಯ ಹೇಳಿದಂತಹ ಒಂದು ಮಾತನಲ್ಲಿ ಶಾಂತಿಯನ್ನು ಕಾಪಾಡಿದ್ದೇವೆ. ಅಲ್ಲದೇ ಜನೋಪಯೋಗಿ ಕೆಲಸಗಳಲ್ಲಿ ಏನೇನು ಬೇಕು ಎನ್ನುವಂತಹ ಮೂಲಭೂತ ಸೌಕರ್ಯಗಳು ಇದ್ದಂತಹ ಶಿಕ್ಷಣ, ನೀರಾವರಿ, ಆರೋಗ್ಯ ಆಡಳಿತ ಆಮೇಲೆ ಕುಡಿಯುವ ನೀರು, ಸಂಪರ್ಕ ಇವುಗಳನ್ನೆಲ್ಲಾ ನೋಡುವುದಾದರೆ ಜನತಾದಳ ಸರ್ಕಾರ ಮಾಡಿದಂತಹ ಸಾಧನೆ ಕಳೆದ 50 ವರ್ಷಗಳಲ್ಲಿ ಮಾಡದೇ ಇರತಕ್ಕಂತಹ ಕೆಲಸಗಳನ್ನು ಜನತಾದಳ ಸರ್ಕಾರ ಮಾಡಿದೆ. ಇದು ಕರ್ನಾಟಕದಲ್ಲಿ ಇದ್ದಂತಹ ಜನತಾದಳ ಸರ್ಕಾರಕ್ಕೆ ಸಲ್ಲಬೇಕಾದಂತಹ ಒಂದು ಮರ್ಯಾದೆ ಎಂದು ಇಲ್ಲಿ ಹೇಳಿದರೆ ಅದು ತಪ್ಪಾಗಲಾರದು. ಈಗಾಗಲೇ ಸನ್ಮಾನ್ಯ ಶ್ರೀ ಸೋಮಶೇಖರ್‌ರವರು ಜನತಾದಳ ಸರ್ಕಾರದ ಕೆಲಸ ಕಾರ್ಯಗಳನ್ನು ಬಿಡಿಸಿ ಬಿಡಿಸಿ ಹೇಳಿದ್ದಾರೆ. ನೀರಾವರಿ ಯೋಜನೆಗಳು ಏನಾಯಿತು, ಗ್ರಾಮೀಣ ಅಭಿವೃದ್ಧಿಗಾಗಿ ಮಾಡಿದಂತಹ ಕೆಲಸಗಳೇನು, ಶಿಕ್ಷಣಕ್ಕಾಗಿ ಮಾಡಿದಂತಹ ಕೆಲಸಗಳು ಏನು, ಸಂಪರ್ಕಕ್ಕಾಗಿ ಮಾಡಿದಂತಹ ಕೆಲಸಗಳ ಒಂದು ಯೋಜನೆ ಏನು, ಕಡಲ ತೀರದಲ್ಲಿರತಕ್ಕಂತಹ ಮೀನುಗಾರರಿಗೆ ಕೊಟ್ಟಂತಹ ಸೌಕರ್ಯಗಳೇನು ಎನ್ನುವಂತಹ ವಿಚಾರವನ್ನು, ಅವರ ಒಂದು ಹೇಳಿಕೆಯಲ್ಲಿ ಅಭಿಮಾನ ಸಂಗತಿ ಏನೆಂದರೆ ಇಲ್ಲಿಯವರೆಗೆ ಹಾಕಿಕೊಂಡಂತಹ ಯೋಜನೆಗಳ ಒಂದು ರೂಪುರೇಷೆಗಳಿಗಿಂತ ಮೂರು ವರ್ಷಗಳಲ್ಲಿ ಆದಂತಹ ಯೋಜನೆಗಳ ರೂಪುರೇಷೆಗಳು ವಿಭಿನ್ನವಾಗಿದೆ ಎನ್ನುವಂತಹ ಮಾತನ್ನು ಇಲ್ಲಿ ಹೇಳಬೇಕು. ಮುಖ್ಯವಾಗಿ ರಾಜ ಮಹಾರಾಜರುಗಳ ಕಾಲದಲ್ಲಿ ನಡೆದುಕೊಂಡಂತಹ ವಿಚಾರ ಅನೇಕ ಮಹಾರಾಜರುಗಳು ಆದರಲ್ಲಿಯೂ ನಾನು ನೋಡಿದ ಹಾಗೆ ವಿದ್ಯಾರಣ್ಯರು ವಿಜಯ ನಗರ ಸಾಮ್ರಾಜ್ಯವನ್ನು ಸ್ಥಾಪನೆ ಮಾಡಿದಾಗ ಹಕ್ಕ ಬುಕ್ಕರಿಗೆ ಏನು ಹೇಳುತ್ತಿದ್ದರು ಎಂದರೆ ನೀವು ಏನಾದರೂ ಮಾಡಿದ್ದು ಆದರೆ ಜನ ಪರವಾದಂತಹ ಕೆಲಸಗಳನ್ನು ಮಾಡಿ, ನಿಮ್ಮ ರಾಜ್ಯವನ್ನು ಬೆಳೆಸಿ ವಿನಃ ಯುದ್ಧವನ್ನು ಮಾಡಿ ರಾಜ್ಯವನ್ನು ಗಳಿಸಬಾರದೆಂದು ಹೇಳಿದ್ದರು. ಯುದ್ಧದಲ್ಲಿ

ಸೋಲು ಗೆಲುವು ಸಹಜವಾದುದು. ಆದರೆ ಜನ ಉಪಯುಕ್ತ ಕೆಲಸಗಳಲ್ಲಿ ನೀವು ವಿಫಲವಾದರೆ ನೀವು ಎಷ್ಟೋ ಯುದ್ಧಗಳಲ್ಲಿ ಸೋತ ಹಾಗೆ ಆಗುತ್ತದೆ ಎನ್ನುವಂತಹ ಮಾತನ್ನು ವಿದ್ಯಾರಣ್ಯರು ಹೇಳುತ್ತಿದ್ದರು. ಆ ವಿಚಾರದಲ್ಲಿ ಆಗಿನ ಕಾಲದಲ್ಲಿ ಹಣವನ್ನು ನೀಡಬಹುದು. ನೀರಾವರಿಗಾಗಿ ಅವರು ಕೈಗೊಂಡಂತಹ ಕಾರ್ಯಕ್ರಮಗಳೇನು ಎನ್ನುವಂತಹ ವಿಚಾರವನ್ನು ನಾವು ಇತಿಹಾಸದಿಂದ ತಿಳಿದುಕೊಳ್ಳಬಹುದು. ಈ ಒಂದು ವಿಚಾರದಲ್ಲಿ ನೀರಾವರಿಗಾಗಿ ಮೊಟ್ಟಮೊದಲನೆಯದಾಗಿ ನೀರಾವರಿಗಾಗಿ ಮಾಡಿದಂತಹ ಒಂದು ಯೋಜನೆಯ ರೂಪುರೇಷೆ ಇದನ್ನೆಲ್ಲಾ ತಮಗೆ ಬಿಡಿಸಿ ಬಿಡಿಸಿ ಹೇಳುವಂತಹ ಅವಶ್ಯಕತೆ ಇಲ್ಲದೇ ಇದ್ದರೂ ಸಹ ಅವುಗಳ ರೂಪುರೇಷೆಗಳ ಒಂದು ಪಕ್ಷಿ ನೋಟವನ್ನು ತಮ್ಮೆಲ್ಲರ ಮುಂದೆ ಇಟ್ಟು ಸಾಮಾನ್ಯ ಜನತೆಗೆ ಮುಟ್ಟುವಂತಹ ವಿಚಾರದಲ್ಲಿ ನಾನು ಕೆಲವು ವಿಚಾರಗಳನ್ನು ಮಾತ್ರ ಇಲ್ಲಿ ಹೇಳಬಯಸುತ್ತೇನೆ. ನೀರಾವರಿ ಅಂದರೆ ಅದರಲ್ಲೂ ನಮ್ಮ ದೇಶ ರೈತರ ದೇಶ ಎಂಬ ಮಾತನ್ನು ನಾವೆಲ್ಲಾ ಹೇಳುತ್ತಿದ್ದೇವೆ. ರೈತರ ದೇಶ ಅಂದರೆ, ರೈತನ ಉದ್ಧಾರವಾಗಲಿಕ್ಕೆ, ರೈತ ಪ್ರಗತಿಯತ್ತ ಸಾಗಬೇಕಾದರೆ ಅವನಿಗೆ ಬೇಕಾದಂಥ ಸೌಲಭ್ಯಗಳು ಏನು, ಅವನಿಗೆ ಬರತಕ್ಕ ಸಮಸ್ಯೆಗಳು ಏನು, ಅವುಗಳನ್ನು ಪರಿಹಾರ ಮಾಡಲಿಕ್ಕೆ ಹಾಕಿಕೊಂಡಂಥ ಉಪಾಯಗಳು ಏನು ಎಂಬ ಮಾತನ್ನು ನೋಡಿದರೆ ಅದರಲ್ಲಿ ಮುಖ್ಯವಾದುದು ನೀರಾವರಿ. ಕಳೆದ 50 ವರ್ಷಗಳಿಂದ ಅದಕ್ಕೂ ಪೂರ್ವದಲ್ಲೂ ಸಹ ನೀರಾವರಿಗೆ ಆದ್ಯತೆ ಕೊಟ್ಟಂಥ ಸರ್ಕಾರ ಇದಾಗುತ್ತದೆ. ಅದರಲ್ಲೂ ಸಹ ನಮ್ಮಲ್ಲಿರತಕ್ಕ ಒಣ ಭೂಮಿ ಎಷ್ಟು, ಹರಿಯತಕ್ಕ ನದಿಗಳು ಎಷ್ಟು, ಆ ನದಿಗಳಲ್ಲಿ ಹರಿಯತಕ್ಕ ನೀರಿನ ಪ್ರಮಾಣ ಏನು, ಅದನ್ನು ಬಳಸಿಕೊಳ್ಳತಕ್ಕ ರೀತಿ ಯಾವುದು, ಯಾವ ಮಟ್ಟದಲ್ಲಿ ಅವನ್ನು ಬಳಸಿಕೊಳ್ಳಬೇಕು, ಮತ್ತು ಅದು ಪ್ರತಿಯೊಬ್ಬ ರೈತರಿಗೆ ಮುಟ್ಟುವಂಥ ಯೋಜನೆ ನೋಡಿದರೆ ಕಳೆದ 3 ವರ್ಷಗಳಲ್ಲಿ ಮಾಡಿದಂಥ ಖರ್ಚು, ನೀರಾವರಿ ಸೌಲಭ್ಯ ಒದಗಿಸಿದಂಥ ಕ್ಷೇತ್ರ ನೋಡಿದರೆ ಅದು ಜನತಾ ದಳದ ಸರ್ಕಾರದ ಒಂದು ಸಾಧನೆ ಎಂದರೆ ಇಲ್ಲಿ ತಪ್ಪಾಗಲಿಕ್ಕಿಲ್ಲವೆಂಬುದು ನನ್ನ ಭಾವನೆ. 2000 ಇಸವಿಯೊಳಗೆ ಕೃಷ್ಣ ನದಿಯ ನೀರನ್ನು ಅಂದರೆ ಕರ್ನಾಟಕಕ್ಕೆ ಬರಬೇಕಾದ ಪಾಲನ್ನು ನಾವು ಪಡೆದೇ ತೀರುತ್ತೇವೆಂಬ ಛಲದಲ್ಲಿ ಸುಮಾರು 3089 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಅನೇಕ ನಾಲೆಗಳ ಕೆಲಸಗಳನ್ನು ಪೂರ್ಣಗೊಳಿಸಿ ಈ ಅವಧಿಯೊಳಗಾಗಿ ಸುಮಾರಾಗಿ ನಮಗೆ ಬರಬೇಕಾದ ನೀರಿನ ಪಾಲನ್ನು ನಾವು ಬಳಸಿಕೊಂಡು ನಮ್ಮ ರೈತರಿಗೆ ಅನುಕೂಲ ಮಾಡಿಕೊಡಬೇಕೆಂಬ ವಿಚಾರದಲ್ಲಿ ಆ ರೈತರ ಒಂದು ಆರ್ಥಿಕ ಸುಧಾರಣೆಯಾಗತಕ್ಕ ದೃಷ್ಟಿಯಲ್ಲಿ ಸುಮಾರಾಗಿ 8 1/2 ಸಾವಿರ ಹೆಕ್ಟೇರ್ ಜಮೀನಿಗೆ ನಾವು ನೀರನ್ನು ಒದಗಿಸಿಕೊಡುವಂತಹ ಒಂದು ಕೆಲಸವನ್ನು ಮಾಡಿದ್ದೇವೆ. ಈ ಕೃಷ್ಣ ನದಿ ನೀರಿನ ಪಾಲನ್ನು ಕರ್ನಾಟಕಕ್ಕೆ ಪಡೆದುಕೊಳ್ಳಬೇಕಾದಂತಹ ವಿಚಾದಲ್ಲಿ ಆರ್ಥಿಕ ಭದ್ರತೆ ಏನು? ಹಣವನ್ನು ಕ್ರೋಢೀಕರಿಸಲಿಕ್ಕೆ ಇರತಕ್ಕ ಮೂಲಗಳು ಯಾವುವು ಎಂಬ ವಿಚಾರವನ್ನು ನಾವು ಮಾಡಿದ್ದೇ ಆದರೆ ಕೃಷ್ಣ ಭಾಗ್ಯ ಜಲ ನಿಗಮ ಎಂಬ ಬಾಂಡುಗಳನ್ನು ತಂದು

ಅವುಗಳ ಮುಖಾಂತರ 1100 ಕೋಟಿ ರೂಪಾಯಿಗಳನ್ನು ನಾವು ಸಂಗ್ರಹಿಸಿದ್ದೇವೆ. ಆದರೂ ಸಹ ಕೆಲಸ ಮಂದಗತಿಯಲ್ಲಿ ಆಗಬಾರದು, ಕೆಲಸ ಯಾವುದೇ ರೀತಿಯಲ್ಲಿ ನಿಲ್ಲಬಾರದು, ರೈತರ ಆಸೆಗೆ ತಣ್ಣೀರು ಎರಚಬಾರದೆಂಬ ದೃಷ್ಟಿಯಿಂದ 1600 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಆ ನೀರಾವರಿ ಕೆಲಸಗಳನ್ನು ನಾವು ಮುಂದುವರಿಸಿದ್ದೇವೆ. ಈ ಒಂದು ವಿಚಾರದಲ್ಲಿ ಕೃಷ್ಣ ಮೇಲ್ದಂಡೆ ಯೋಜನೆ ಇರಲಿ, ವಿಶ್ವೇಶರಯ್ಯ ನಾಲೆ ಇರಲಿ, ಕಾವೇರಿ ಕಣಿವೆ ಕೆಲಸ ಇರಲಿ, ಅವುಗಳನ್ನು ಯಾವ ರೀತಿ ನಾವು ತೆಗೆದುಕೊಳ್ಳಬೇಕೆಂಬ ವಿಚಾರದಲ್ಲಿ ಸುಮಾರಾಗಿ ವಿಶ್ವೇಶ್ವರಯ್ಯ ನಾಲೆ ಕೆಲಸಕ್ಕೆ 60 ಕೋಟಿ ರೂಪಾಯಿಗಳನ್ನು ಖರ್ಚು ಮಾಡುವಂಥ ಒಂದು ಯೋಜನೆ ಸರ್ಕಾರದ ಹಂತದಲ್ಲಿದೆ. ಇನ್ನು ಕಾವೇರಿ ಕಣಿವೆ ಅಭಿವೃದ್ಧಿ ಸಲುವಾಗಿ ಸುಮಾರು 230 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಿಕ್ಕೆ ಸರ್ಕಾರ ಯೋಜನೆ ಹಾಕಿಕೊಂಡಿದೆ. ಅದು ಅಲ್ಲದೆ ಘಟಪ್ರಭಾ ನದಿಗೆ ಅಣೆಕಟ್ಟು ಕಟ್ಟಿ ಸುಮಾರು 30 ವರ್ಷವಾಯಿತು. ಕಡಬಗಟ್ಟಿ ಸುರಂಗ ಮಾರ್ಗ ಕರ್ನಾಟಕದಲ್ಲೇ ಅತಿ ಉದ್ದವಾದ ಮತ್ತು ವಿಸ್ತಾರವಾದ ಸುರಂಗ ಮಾರ್ಗ. ಆ ಸುರಂಗ ಮಾರ್ಗದಲ್ಲಿ ನೀರು ಬಿಟ್ಟು ಅಥವಾ ನೀರನ್ನು ಅದರ ಮೂಲಕ ಹಾಯಿಸಿ ಜನರಿಗೆ, ರೈತರಿಗೆ ನೀರು ಕೊಡುವುದಕ್ಕೆ 6 ವರ್ಷಗಳ ಕಾಲ ಹಿಡಿದದ್ದು ನೋಡಿದರೆ, ಹಿಂದಿನ ಸರ್ಕಾರ ಮಾಡದಂಥ ಕೆಲಸವನ್ನು ಜನತಾ ದಳದ ಸರ್ಕಾರ ಮಾಡಿದೆ. ಕಳೆದ ಎರಡು ವರ್ಷಗಳ ಹಿಂದೆ ಅದೇ ಕಡಬಗಟ್ಟಿ ಸುರಂಗ ಮಾರ್ಗವನ್ನು ಉದ್ಘಾಟನೆ ಮಾಡಿ ಒಕ್ಕಲಗೇರಿ ಎಂಬ ಸ್ಥಳದಲ್ಲಿ ಮೇಲು ಸೇತುವೆ ಕಟ್ಟಿ ನೀರು ಹಾಯಿಸಿ 4200 ಹೆಕ್ಟೇರ್ ಜಮೀನಿಗೆ ನೀರಾವರಿ ಸೌಲಭ್ಯ ಒದಗಿಸಿಕೊಟ್ಟು ರೈತರ ಸೇವೆಯಲ್ಲಿ ತೊಡಗಿದ ಸರ್ಕಾರ ಅಂದರೆ ನಮ್ಮ ಜನತಾ ದಳದ ಸರ್ಕಾರ. ಇನ್ನು ಜಲಾನಯನ ಪ್ರದೇಶದ ಅಭಿವೃದ್ಧಿ ಯೋಜನೆಯಲ್ಲಿ ಯುನೈಟೆಡ್ ಕಿಂಗ್‌ಡಂ (ಅಂತರ್‌ರಾಷ್ಟ್ರೀಯ ಅಭಿವೃದ್ಧಿ) ಮೂಲಕ ಸುಮಾರು 83 ಕೋಟಿ ರೂಪಾಯಿಗಳನ್ನು ಪಡೆದು ಚಿತ್ರದುರ್ಗ, ಬಳ್ಳಾರಿ ಮತ್ತು ಬಿಜಾಪುರ ಜಿಲ್ಲೆಗಳಿಗೆ ಆ ಯೋಜನೆಯ ಒಂದು ಲಾಭ ದಕ್ಕಲಿ ಎಂಬ ವಿಚಾರದಲ್ಲಿ ನಮ್ಮ ಸರ್ಕಾರ ದಿಟ್ಟ ಹೆಜ್ಜೆಯನ್ನು ಇಟ್ಟು ಆ ಜಲಾನಯನ ಪ್ರದೇಶದ ಅಭಿವೃದ್ಧಿಗೋಸ್ಕರ ಮಾಡಿದಂಥ ಕಾರ್ಯ ಒಂದು ಹೆಮ್ಮೆಯ ಘನ ಕಾರ್ಯ ಎಂದು ಇಲ್ಲಿ ಹೇಳಿದರೆ ತಪ್ಪಾಗಲಿಕ್ಕೆ ಇಲ್ಲವೆಂಬ ಭಾವನೆ ನನ್ನದು. ಇನ್ನು ನಮ್ಮಲ್ಲಿ ಅಂತರ್ಜಲ ಮಟ್ಟ ಕಡಿಮೆಯಾಗುತ್ತಾ ಹೋಗುತ್ತಿದೆ; ಮಳೆಯ ಪ್ರಮಾಣ ಕಡಿಮೆಯಾಗುತ್ತಾ ಹೊಗುತ್ತಿದೆ. ಇದರಿಂದ ನೀರಾವರಿಗೆ ಪೆಟ್ಟು ಬೀಳಬಹುದು, ರೈತರ ಹಿತಕ್ಕೆ ಧಕ್ಕೆ ಉಂಟಾಗಬಹುದೆಂಬ ಮಾತಿನ ಒಳಗುಟ್ಟನ್ನರಿತು ನಮ್ಮ ಸರ್ಕಾರ ಹನಿ ನೀರಾವರಿ ಎಂಬ ಯೋಜನೆಯನ್ನು ಹಾಕಿಕೊಂಡು ಅದರಿಂದ ಕಡಿಮೆ ನೀರಾವರಿ ಎಂಬ ಯೋಜನೆಯನ್ನು ಹಾಕಿಕೊಂಡು ಅದರಿಂದ ಕಡಿಮೆ ನೀರಿನಲ್ಲಿ ಅನೇಕ ರೈತರಿಗೆ ಸೌಲಭ್ಯ ಒದಗಿಸಿಕೊಡಬಹುದೆಂದು ವಿಚಾರ ಮಾಡಿ 10 ಸಾವಿರ ಹೆಕ್ಟೇರ್ ಜಮೀನಿಗೆ ನೀರು ಒದಗಿಸಿಕೊಡುವ ಯೋಜನೆ ಸರ್ಕಾರದ ಪ್ರಗತಿಯ ಹಂತದಲ್ಲಿದೆ ಎಂಮ ಮಾತನ್ನು ಹೇಳಬಯಸುತ್ತೇನೆ.

(ಶ್ರೀಯುತರುಗಳಾದ ವಾಟಾಳ್ ನಾಗರಾಜ್ ಮತ್ತು ಶ್ರೀರಾಮರೆಡ್ಡಿಯವರು ಧರಣಿಯಲ್ಲಿದ್ದರು)

ಉಪಾಧ್ಯಕ್ಷರು: ಶ್ರೀ ವಾಟಾಳ್ ನಾಗರಾಜ್ ಅವರು ಮತ್ತು ಶ್ರೀ ಶ್ರೀರಾಮ ರೆಡ್ಡಿಯವರು ತಮ್ಮ ತಮ್ಮ ಸ್ಥಳಗಳಿಗೆ ಹೋಗಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಸರ್ಕಾರಕ್ಕೂ ಕನಿಕರ ಇಲ್ಲವಲ್ಲಾ.

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ವಿರೋಧ ಪಕ್ಷದ ನಾಯಕರ ಸಲಹೆಯನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ದಯಮಾಡಿ ಹಿರಿಯ ಸದಸ್ಯರು ತಮ್ಮ ತಮ್ಮ ಸ್ಥಾನಗಳಿಗೆ ಹೋಗಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅವರನ್ನು ಬಿಟ್ಟು ಸದನ ಹೇಗೆ ನಡೆಸುವುದು?

ಉಪಾಧ್ಯಕ್ಷರು: ನಿಮ್ಮ ಮಾತಿಗೆ ಅವರು ಬೆಲೆ ಕೊಟ್ಟಿದ್ದಾರೆ, ದಯಮಾಡಿ ತಾವು ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನೀವು ಹೇಳಿದ ಕಡೆ ಅವರು ಹೋಗುವುದಕ್ಕಾಗುವುದಿಲ್ಲ.

ಉಪಾಧ್ಯಕ್ಷರು: ಒಮ್ಮೆ ಹೋಗುತ್ತಾರೆ, ಒಮ್ಮೆ ಬಿಡುತ್ತಾರೆ.

ಶ್ರೀ ಚಂದ್ರಶೇಖರ್ ಸದಾಶಿವ ನಾಯಕ್: ಈ ನೀರಾವರಿ ಸೌಲಭ್ಯ ಅನೇಕ ಹಂತಗಳಲ್ಲಿ ನಡೆಯುತ್ತಿದೆ. ಏತ ನೀರಾವರಿ, ಗಂಗಾ ಕಲ್ಯಾಣ, ಹೊಸದಾಗಿ ರಚಿತವಾದ ಮಾರ್ಕಂಡೇಯ ಇತ್ಯಾದಿ ಯೋಜನೆಗಳು ನಡೆಯುತ್ತಿದೆ. ಕಳೆದ 30 ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ಮಾರ್ಕಂಡೇಯ ಉತ್ತರ ಕರ್ನಾಟಕದ ಒಂದು ಕಲ್ಪವೃಕ್ಷವಾಗಿ ಈಗ ಪರಿಣಮಿಸುತ್ತಿದೆ. ಇದರ ಶ್ರೇಯಸ್ಸು ನಮ್ಮ ಜನತಾ ದಳದ ಸರ್ಕಾರಕ್ಕೆ ಸಲ್ಲುತ್ತದೆಂಬ ಮಾತನ್ನು ಹೇಳಬಯಸುತ್ತೇನೆ. ಹಿಪ್ಪರಗಿ ಅಣೆಕಟ್ಟು, ಮಹದಾಯಿ ಯೋಜನೆಗಳು ಸಹ ನಡೆಯುತ್ತಿವೆ. ಮಾರ್ಕಂಡೇಯ ಮತ್ತು ಮಹದಾಯಿ ಯೋಜನೆಗಳನ್ನು ನೋಡಿದರೆ ಅವು ಸುಮಾರು 3 ಜಿಲ್ಲೆಗಳಿಗೆ ಉಪಯೋಗವಾಗುವಂಥ ಯೋಜನೆಗಳು. ಗೋವಾ ಸರ್ಕಾರದ ಸಹಯೋಗದೊಂದಿಗೆ ಮಲಪ್ರಭಾಕ್ಕೆ ಮಹದಾಯಿಯನ್ನು ಜೋಡಿಸಿದ್ದೇ ಆದರೆ ಇನ್ನೂ 4 ಟಿ.ಎಂ.ಸಿ. ನೀರನ್ನು ಪಡೆದು ರೈತರ ಸೇವೆಯಲ್ಲಿ ಭಾಗಿಯಾಗುವುದಕ್ಕೆ ನಮಗೆ ಅವಕಾಶ ಸಿಗುತ್ತದೆಂಬ ಮಾತನ್ನು ವಿಚಾರ ವಿನಿಮಯ ಮಾಡಿ ಗೋವಾ ಸರ್ಕಾರದ ಮನಸ್ಸನ್ನು ಒಲಿಸಿ ಈ ಮಹದಾಯಿ ಕಾರ್ಯ ರೂಪಕ್ಕೆ ತರುವುದಕ್ಕೆ ನಮ್ಮ ಸರ್ಕಾರ ಯೋಜನೆಯನ್ನು ಹಾಕಿಕೊಂಡಿದೆ. ಸುಮಾರು 40 ವರ್ಷಗಳಿಂದ ಕೆರೆಗಳಲ್ಲಿ ನೀರು ಇಲ್ಲದಿದ್ದರೂ ಸಹ ಅಲ್ಲಿರತಕ್ಕ ಹೂಳನ್ನು ತೆಗೆಯುವಂತ ವಿಚಾರವನ್ನು ಯಾವ

ಸರ್ಕಾರವು ಮಾಡಲಿಲ್ಲ. ಅಲ್ಲಿ ಬರುವಂಥ ನೀರನ್ನು ಸಂಗ್ರಹಿಸಿದರೆ ಅನೇಕ ರೈತರಿಗೆ ಉಪಯೋಗವಾಗುತ್ತಿದೆ ಕುಡಿಯುವ ನೀರಿಗೆ, ದನಕರುಗಳಿಗೆ ಉಪಯೋಗವಾಗುತ್ತದೆಂಬ ಮಾತನ್ನು ಗಮನದಲ್ಲಿಟ್ಟುಕೊಂಡು ಪ್ರಪ್ರಥಮವಾಗಿ ನಾವು ಮಾಡತಕ್ಕ ಕೆಲಸ ಕೆರೆಗಳಲ್ಲಿ ಇದ್ದಂಥ ಹೂಳನ್ನು ಎತ್ತತಕ್ಕದ್ದು ಆಗಬೇಕು. ಎಷ್ಟೇ ಮಳೆಯಾಗಲಿ, ನೀರು ಬರಲಿ, ಆ ನೀರನ್ನು ಸಂಗ್ರಹ ಮಾಡಿ ಜನತೆಗೆ ಕೊಡಬೇಕೆಂಬ ವಿಚಾರದಲ್ಲಿ ಸುಮಾರು 400 ಕೋಟಿ ರೂಪಾಯಿಗಳ ಒಂದು ಯೋಜನೆಯನ್ನು ಸರ್ಕಾರ ಹಾಕಿಕೊಂಡು ಅದರ ಕಾರ್ಯ ರೂಪಕ್ಕೆ ನಮ್ಮ ಸರ್ಕಾರ ಪ್ರಯತ್ನ ಮಾಡುತ್ತಿದೆ ಎಂಬ ಮಾತನ್ನು ಇಲ್ಲಿ ನಾನು ಹೇಳಬಯಸುತ್ತೇನೆ.

5.00 ಪಿ.ಎಂ

ಇದಲ್ಲದೆ, ಗಂಗಾ ಕಲ್ಯಾಣ ಯೋಜನೆ ತಮಗೆಲ್ಲಾ ಗೊತ್ತಿರುವ ವಿಷಯ. ಗಂಗಾ ಕಲ್ಯಾಣ ಯೋಜನೆಯಿಂದ ಅನೇಕ ಕೊಳವೆ ಬಾವಿಗಳನ್ನು ತೆಗೆದಿದ್ದೇವೆ. ಅದಕ್ಕೆ ತಗುಲುವ ವೆಚ್ಚವನ್ನು, ವಿದ್ಯುತ್ ಸೌಕರ್ಯಕ್ಕಾಗಿ ಬೇಕಾದ ವೆಚ್ಚವನ್ನು ಸರ್ಕಾರವೇ ಭರಿಸಿ, ರೈತರಿಗೆ ಅನುಕೂಲ ಮಾಡಿಕೊಡುವ ವಿಚಾರದಲ್ಲಿ ಒಂದು ದಿಟ್ಟ ಹೆಜ್ಜೆಯನ್ನಿಟ್ಟು ಕೆಲಸ ಮಾಡುತ್ತಿದೆ ಎನ್ನುವ ವಿಚಾರವನ್ನು ಇಲ್ಲಿ ನಾನು ಪ್ರಸ್ತುತಪಡಿಸುತ್ತೇನೆ. ಆಮೇಲೆ, ದೇಶದ ಬೆನ್ನೆಲುಬಾದ ಶಿಕ್ಷಣ. ಎಲ್ಲಿ ಶಿಕ್ಷಣವಿಲ್ಲ ಅಲ್ಲಿ ತಿಳುವಳಿಕೆ ಇಲ್ಲ ಅಥವಾ ಎಲ್ಲಿ ಶಿಕ್ಷಣ ಇರುತ್ತದೆ ಅಲ್ಲಿ ತಿಳುವಳಿಕೆ ಇರುತ್ತದೆ, ಎಲ್ಲಿ ತಿಳುವಳಿಕೆ ಇರುತ್ತದೆ ಅಲ್ಲಿ ಒಗ್ಗಟ್ಟಿರುತ್ತದೆ, ಎಲ್ಲಿ ಒಗ್ಗಟ್ಟಿರುತ್ತದೆ ಅಲ್ಲಿ ಶಕ್ತಿ ಇರುತ್ತದೆ, ಎಲ್ಲಿ ಶಕ್ತಿ ಇರುತ್ತದೆ ಅಲ್ಲಿ ಸಾಧನೆ ಇರುತ್ತದೆ, ಎಲ್ಲಿ ಸಾಧನೆ ಇರುತ್ತದೆ ಅಲ್ಲಿ ಗುರಿ ಇರುತ್ತದೆನ್ನುವ ಮಾತು. ಸಾಧನೆಯಾದ ಮೇಲೆ ಗುರಿ ಎನ್ನುವ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ, ನಾವು ಸಾಧಿಸಿದ ಕೆಲಸವೇನು? ಇನ್ನುಮೇಲೆ ಸಾಧಿಸಬೇಕಾದ ಗುರಿ ಯಾವುದು ಎನ್ನುವ ವಿಚಾರದಲ್ಲಿ ಪ್ರತಿಯೊಬ್ಬರಿಗೂ ಶಿಕ್ಷಣ ಬೇಕು ಎನ್ನುವ ಮಾತನ್ನು ಅಲ್ಲಿ ಆದಿಕಾಲದಿಂದಲೂ ಎಲ್ಲಾ ಹಿರಿಯರೂ ಹೇಳುತ್ತಾ ಬಂದಿದ್ದಾರೆ. ಅಜ್ಞಾನ ದೇಶದ ಶಾಂತಿಗೆ ಭಂಗ ತರುತ್ತದೆನ್ನುವ ಮಾತು. ಹಾಗಾದರೆ, ಶಿಕ್ಷಣಕ್ಕಾಗಿ ಸರ್ಕಾರ ಹಾಕಿಕೊಂಡ ಯೋಜನೆಗಳನ್ನು ನೋಡಿದಾಗ, ಸುಮಾರಾಗಿ ಉದಾಹರಣಾರ್ಥವಾಗಿ ನನ್ನ ಕ್ಷೇತ್ರದ ಒಂದು ಮಾತನ್ನು ಹೇಳುತ್ತೇನೆ, ಇನ್ನು ಕೆಲವೇ ಕೆಲವು ಶಾಲಾ ಕೋಣೆಗಳನ್ನು ಕಟ್ಟಿದರೆ, ನಮಗೆ ಸುಮಾರು 10 ವರ್ಷಗಳವರೆಗೆ ಶಾಲಾ ಕೋಣೆಗಳು ಬೇಡ. ಈ ಮಾತನ್ನು ಇಲ್ಲಿ ಏಕೆ ಪ್ರಸ್ತಾಪಿಸುತ್ತಿದ್ದೇನೆಂದರೆ, ಶಾಲಾ ಕೋಣೆಗಳ ಒಂದು ನಿರ್ಮಾಣ, ಇದ್ದಂಥ ಕಟ್ಟಡಗಳ ದುರಸ್ತಿ, ಅಲ್ಲಿಗೆ ಬೇಕಾದ ಉಪಾಧ್ಯಾಯರ ನೇಮಕ ಇದು ಶಿಕ್ಷಣಕ್ಕೆ ಮುಖ್ಯವಾದ ಅಂಶ. ಪ್ರಪ್ರಥಮವಾಗಿ ನಾವೆಲ್ಲಾ ದೇವಸ್ಥಾನದಲ್ಲಿ ಶಿಕ್ಷಣ ಕಲಿಯುವ ಪ್ರಸಂಗವಿತ್ತು - ಅಥವಾ 200 ಹುಡುಗರಿಗೆ ಒಬ್ಬರೇ ಶಿಕ್ಷಕರಿರುವ ಒಂದು ಪರಿಪಾಠವಿತ್ತು. ಅಂಥ ಒಂದು ಸಮಸ್ಯೆಯನ್ನು ನಮ್ಮ ಶಿಕ್ಷಣ ಸಚಿವರಾದ ಮಾನ್ಯ ಶ್ರೀ ಎಚ್.ಜಿ.ಗೋವಿಂದೇಗೌಡರವರು ಯಾವ ರೀತಿ ಬಗೆಹರಿಸಿದರೆನ್ನುವ ಮಾತನ್ನು

ನೆನೆಸಿಕೊಂಡರೆ ಸುಮಾರಾಗಿ 42 ಸಾವಿರ ಶಿಕ್ಷಕರನ್ನು ನೇಮಕ ಮಾಡಿದರು. ಈ ವರ್ಷ 30 ಸಾವಿರ ಶಿಕ್ಷಕರನ್ನು ಭರ್ತಿ ಮಾಡಬೇಕೆನ್ನುವ ವಿಚಾರವನ್ನು ಹೊಂದಿದ್ದಾರೆ. ಸುಮಾರಾಗಿ 72 ಸಾವಿರ ಶಿಕ್ಷಕರನ್ನು ಭರ್ತಿ ಮಾಡುವ ವಿಚಾರದಲ್ಲಿ ಯಾವುದೇ ತರಹದ ಭ್ರಷ್ಟಾಚಾರ ನಡೆಯಬಾರದು, ಆಯ್ಕೆಯಾದ ಅಭ್ಯರ್ಥಿಗಳು, ಆಯ್ಕೆಯಾದ ಶಿಕ್ಷಕರು, ಯಾವುದೇ ಆಮಿಷಕ್ಕೆ ಬಲಿಯಾಗಬಾರದು, ಯಾರಿಗಾದರೂ ವಸೂಲಿ ಹಚ್ಚುವ ಕೆಲಸವನ್ನು ಅವರು ಮಾಡಬಾರದು, ಮೆರಿಟ್ ಪ್ರಕಾರ, ಜೇಷ್ಠತೆ ಪ್ರಕಾರ ಅವರಿಗೆ ಆಯ್ಕೆಯ ಒಂದು ಆದೇಶಗಳನ್ನು ಕಳುಹಿಸುವ ವಿಚಾರದಲ್ಲಿ ಮಾಡಿದ ಕೆಲಸ ನೋಡಿದರೆ ಪ್ರಪ್ರಥಮವಾಗಿ 72 ಸಾವಿರ ಶಿಕ್ಷಕರ ಭರ್ತಿಯಲ್ಲಿ ಯಾವುದೇ ಒಂದು ಲೋಪದೋಷವಿರಲಾರದೆ ಈ ಆಯ್ಕೆ ಮಾಡಿದ್ದನ್ನು ನೋಡಿದರೆ ಅದು ನಮ್ಮ ಸರ್ಕಾರಕ್ಕೆ ಸಲ್ಲಬೇಕಾದ ಒಂದು ಹೆಮ್ಮೆ. ಇನ್ನು, ಶಿಕ್ಷಣಕ್ಕೆ ಬೇಕಾದ ಪರಿಸರವೇನು? ಪಾಠೋಪಕರಣಗಳಾವುವು? ಪೀಠೋಪಕರಣಗಳಾವುವು? ವೈಜ್ಞಾನಿಕವಾಗಿ ಬೇಕಾದ ಸಾಮಾನುಗಳಾವುವು ಎನ್ನುವ ವಿಚಾರದಲ್ಲಿ ಪರಿಸರ ಇಲಾಖೆಯಿಂದ ವಿಜ್ಞಾನಕ್ಕೆ ಸಂಬಂಧಪಟ್ಟಂತೆ ಅನೇಕ ಉಪಕರಣಗಳನ್ನು ಸರ್ಕಾರ ಕೂಡ ಮಾಡಿದೆ. ಇದರಿಂದಾಗಿ, ಕೇವಲ ನಕ್ಷೆ ಮೂಲಕ ಕಲಿಯುವ ವಿಚಾರದಲ್ಲಿ, ಕೇವಲ ಪುಸ್ತಕದಿಂದ, ಕೇವಲ ಶಬ್ದಗಳಿಂದ ಜೋಡಣೆಯಿಂದ ಕಲಿಯುವ ವಿಚಾರದಲ್ಲಿ, ಶಾಲೆಯ ಶಿಕ್ಷಣ ಈ ಕೃತಿಗಳ ಮೂಲಕ ಸಾಗಲಿ, ನಿದರ್ಶನಗಳ ಮೂಲಕ ಸಾಗಲಿ, ಪಾಠೋಪಕರಣಗಳ ಮೂಲಕ ಸಾಗಲಿ ಎನ್ನುವ ವಿಚಾರದಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಒಂದು ಸಮಗ್ರವಾದ ಬದಲಾವಣೆಯನ್ನು ನಮ್ಮ ಶಿಕ್ಷಣ ಸಚಿವರು ತಂದಿದ್ದಾರೆ. ಈಗಾಗಲೇ 8 ಸಾವಿರ ಕೋಣೆಗಳನ್ನು ಕಟ್ಟಿಸಿದ್ದಾರೆ. ಇನ್ನೂ 12 ಸಾವಿರ ಕೋಣೆಗಳನ್ನು ಕಟ್ಟುವ ವಿಚಾರ ಸರ್ಕಾರದ ಮುಂದಿದೆ. ಈ ವಿಚಾರದಲ್ಲಿ ಸುಮಾರಾಗಿ 20 ಸಾವಿರ ಕೋಣೆಗಳನ್ನು ರಾಜ್ಯದಲ್ಲೇನಾದರೂ ಕಟ್ಟಿದರೆ ದೇವಸ್ಥಾನದಲ್ಲಿ ಕಲಿಯತಕ್ಕ ಒಂದು ವಿಚಾರವೇನಿತ್ತು, ಅದನ್ನು 50 ವರ್ಷಗಳಾದರೂ ನಾವು ಸಾಧಿಸಿಲ್ಲ, ಆ ಸಾಧನೆ ಶಿಕ್ಷಕರ ನೇಮಕಾತಿಯಾಯಿತು, ಶಾಲಾ ಕೋಣೆಗಳ ದುರಸ್ತಿಯಾಯಿತು, ಶಾಲಾ ಕೋಣೆಗಳ ಒಂದು ನಿರ್ಮಾಣವಾಯಿತು - ಈ ಎಲ್ಲಾ ಹೆಗ್ಗಳಿಕೆ ನಮ್ಮ ಸರ್ಕಾರಕ್ಕೆ ಸಲ್ಲುತ್ತದೆನ್ನುವ ಮಾತನ್ನು ನಾನು ಹೇಳಲಿಕ್ಕೆ ಇಚ್ಛಿಸುತ್ತೇನೆ. ಇನ್ನು, ಕಪ್ಪು ಹಲಿಗೆ ಕಾರ್ಯಾಚರಣೆಯೊಳಗೆ ಅನೇಕ ಶಿಕ್ಷಕರ ಭರ್ತಿಯಾಯಿತು. ಈಗಾಗಲೇ 7 ಜಿಲ್ಲೆಗಳಿಗಿದ್ದ ಈ ಯೋಜನೆಯನ್ನು ಇನ್ನೂ 11 ಜಿಲ್ಲೆಗಳಿಗೆ ಅನ್ವಯಿಸಿ ಶಿಕ್ಷಣದ ಒಂದು ಸುಧಾರಣೆಯಲ್ಲಿ ಮೈಲಿಗಲ್ಲನ್ನು ಹಾಕಬೇಕೆನ್ನುವ ವಿಚಾರದಲ್ಲಿ ಸರ್ಕಾರ ಅನೇಕ ಯೋಜನೆಗಳನ್ನು ಹಾಕಿಕೊಂಡಿದೆ. ಈಗಾಗಲೇ ಮಾನ್ಯ ಶ್ರೀ ಬಿ.ಸೋಮಶೇಖರ್‌ರವರು ಹೇಳಿದ ಹಾಗೆ, ನೇತಾಜಿ ಶ್ರೀ ಸುಬಾಷ್‌ಚಂದ್ರಬೋಸ್‌ರವರ ಜನ್ಮಶತಾಬ್ದಿ ಅಂಗವಾಗಿ 224 ಕ್ಷೇತ್ರಗಳಿಗೂ ಒಂದೊಂದು ಸರ್ಕಾರಿ ಪ್ರೌಢಶಾಲಾ ಕಟ್ಟಡವನ್ನು ನಿರ್ಮಾಣ ಮಾಡಲು ಆದ್ಯತೆ ಕೊಟ್ಟಿದ್ದಾರೆ, ಹಣವನ್ನೊದಗಿಸಿದ್ದಾರೆ. ಈಗಾಗಲೇ ಕೆಲವು ಹಂತಗಳಲ್ಲಿ ಪ್ರಾರಂಭಿಸಲಾಗಿದೆಯೆನ್ನುವ ಮಾತನ್ನು ಇಲ್ಲಿ ನಾನು ಹೇಳಬಯಸುತ್ತೇನೆ. ಆಮೇಲೆ,

ವಯಸ್ಕರ ಶಿಕ್ಷಣದ ಸಲುವಾಗಿ ಸುಮಾರು 25 ಲಕ್ಷ ಜನರನ್ನು ಶಿಕ್ಷಕರನ್ನಾಗಿ ಮಾಡಿ, ಅಜ್ಞಾನವನ್ನು ಹೋಗಲಾಡಿಸುವ ಕೆಲಸವನ್ನು ಸರ್ಕಾರ ಮಾಡಿದೆ. ಇದಲ್ಲದೆ, ಕನ್ನಡ ನಾಡು ಸಾಕ್ಷರ ನಾಡು ಎನ್ನುವ ವಿಚಾರವನ್ನು ವೇದಿಕೆ ಮುಖಾಂತರ ತಿಳಿಸಿಕೊಡಲು ಒಂದು ಸಮಿತಿ ನೇಮಿಸಲು ಹಾಕಿಕೊಂಡ ಯೋಜನೆಯ ಒಂದು ಅನುಷ್ಠಾನದಲ್ಲಿ ದಿಟ್ಟಹೆಜ್ಜೆ ಇಡತಕ್ಕ ಸರ್ಕಾರ ಈ ಕೆಲಸಗಳನ್ನು ಮಾಡಿದೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ ಎನ್ನುವ ಭಾವನೆ ಇದೆ. ಅದಲ್ಲದೆ, ಅನೇಕ ವರ್ಷಗಳಿಂದ ಪ್ರೌಢಶಾಲೆಗಳಲ್ಲಿ ಕಲಿಯುವ ಮಕ್ಕಳಿಗೆ ಶಿಷ್ಯ ವೇತನ ಎಷ್ಟಿತ್ತೆಂದರೆ, 100 ರೂಪಾಯಿಗಳು. ಕೇವಲ ನೂರು ರೂಪಾಯಿಗಳಿಂದ ಏನಾಗುತ್ತದೆಂದು ಯಾರೂ ವಿಚಾರ ಮಾಡಲಿಲ್ಲ. ಆ ಶಿಷ್ಯ ವೇತನವನ್ನ ನೂರು ರೂಪಾಯಿಗಳಿಂದ 600 ರೂಪಾಯಿಗಳಿಗೆ ಹೆಚ್ಚಿಸುವ ಒಂದು ಯೋಜನೆಯನ್ನು ಜನತಾದಳ ಸರ್ಕಾರ ಹಾಕಿಕೊಂಡು ಅದನ್ನು ಅನುಷ್ಠಾನಕ್ಕೆ ತರಲು ಪ್ರಯತ್ನಿಸಿ, ಅದರಲ್ಲಿ ಸಫಲವಾಗಿದೆ ಎನ್ನುವ ಮಾತನ್ನು ಇಲ್ಲಿ ನಾನು ತಮ್ಮ ಮುಖಾಂತರ ಹೇಳಬಯಸುತ್ತೇನೆ. ಇನ್ನು, ಗ್ರಾಮೀಣ ಪ್ರದೇಶದಲ್ಲಿ ಕಲಿಯತಕ್ಕ ಮಕ್ಕಳಿಗೆ ಅವರು ಶಿಕ್ಷಣ ಪಡೆಯಲಿಕ್ಕೆ ಸೌಲಭ್ಯವಿರಲಾರದ ಗ್ರಾಮಗಳಲ್ಲಿ ವಸತಿ ನಿಲಯಗಳನ್ನು ಹೊಸದಾಗಿ ಪ್ರಾರಂಭಿಸಿ, ಕಳೆದ ಅವಧಿಯಲ್ಲಿ ಸುಮಾರು 280 ವಸತಿ ನಿಲಯಗಳನ್ನು ಸ್ಥಾಪಿಸಿ, ಹಲವು ವಸತಿ ನಿಲಯಗಳಿಗೆ ಕಟ್ಟಡವನ್ನು ಕಟ್ಟಿಸಿ, ಶಿಕ್ಷಣಕ್ಕೆ ಗ್ರಾಮೀಣ ಪ್ರದೇಶದಲ್ಲಿ ಅನುಕೂಲ ಮಾಡಿಕೊಡುವ ವಿಚಾರವನ್ನು ಸರ್ಕಾರ ಹಾಕಿಕೊಂಡಿದೆ ಎನ್ನುವ ಮಾತನ್ನು ಈ ಮೂಲಕ ತಮ್ಮಲ್ಲಿ ಹೇಳಬಯಸುತ್ತೇನೆ. ಇನ್ನು, ಗ್ರಾಮೀಣಾಭಿವೃದ್ಧಿ ಎಂದಾಗ, ಇಡೀ ನಮ್ಮ ಕರ್ನಾಟಕ ರಾಜ್ಯದಲ್ಲಿ ಮೂಲ ಭೂತವಾಗಿ ಬೇಕಾದ ಸೌಕರ್ಯಗಳನ್ನು ಒದಗಿಸಿಕೊಡಲು ಬೇಕಾದ ಇಲಾಖೆ ಎಂದರೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ. ಈ ಪಂಚಾಯತ್‌ರಾಜ್ ಇಲಾಖೆಯನ್ನು ನಾವು ಕಳೆದ ಮೂರು ವರ್ಷಗಳಲ್ಲಿ ನೋಡಿದಾಗ ಅಧಿಕಾರ ವಿಕೇಂದ್ರೀಕರಣವನ್ನು ನಿಜವಾಗಿಯೂ ಜಾರಿಗೆ ತಂದಂಥ ಇಲಾಖೆಯ ಈ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ. ಹಲವಾರು ವರ್ಷಗಳಿಂದ ಜನರ ಕೈಗೆ ಅಧಿಕಾರ ಇರಲಾರದೆ ಏನಾದರೂ ಬೇಡಿಕೆಗಳಿದ್ದರೆ ಅವುಗಳನ್ನು ಜಿಲ್ಲಾಧಿಕಾರಿಗಳು ವಿಭಾಗಾಧಿಕಾರಿಗಳ ಮುಖಾಂತರ ಪಡೆಯುವಂಥ ವಿಚಾರವನ್ನು ಮೊದಲು ಮಾಡುತ್ತಿದ್ದರು. ಆ ವಿಚಾರದಲ್ಲಿ ಒಂದು ಕ್ರಾಂತಿಕಾರಕವಾದ ಹೆಜ್ಜೆಯನ್ನು ಇಟ್ಟು ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಗಳಿಗೆ ಚುನಾವಣೆಯನ್ನು ನಡೆಸಿ ಅವರ ಕೈಗೆ ಅಧಿಕಾರವನ್ನು ಕೊಟ್ಟು ಸ್ಥಳೀಯ ಮಟ್ಟದಲ್ಲಿ ಬೇಕಾದಂಥ ಸೌಲಭ್ಯಗಳನ್ನು ಪಡೆಯಲಿಕ್ಕೆ ಸ್ಥಳೀಯ ಸಂಸ್ಥೆಗಳಿಂದ ಆಯ್ಕೆಯಾದ ಪ್ರತಿನಿಧಿಗಳಿಗೆ ಅಧಿಕಾರವನ್ನು ಕೊಟ್ಟಿತು. ಆ ಒಂದು ವಿಚಾರದಲ್ಲಿ ಮೀಸಲಾತಿಯ ಒಂದು ಅಂಶ ಎಲ್ಲರ ಗಮನದಲ್ಲೂ ಇದೆ. ನಮ್ಮ ರಾಜ್ಯದಲ್ಲಿರತಕ್ಕಂಥ ಎಲ್ಲಾ ಜನತೆ ಅಧಿಕಾರವನ್ನು ಪಡೆಯಬೇಕು, ದುರ್ಬಲವರ್ಗದವರು ಅಧಿಕಾರವನ್ನು ಪಡೆಯಬೇಕು, ದೇಶದ ಆಡಳಿತದ ಒಂದು ಚುಕ್ಕಾಣಿಯನ್ನು ಹಿಡಿಯಲಿಕ್ಕೆ ಪ್ರತಿಯೊಬ್ಬ ಪ್ರಜೆ ಸನ್ನದ್ಧರಾಗಬೇಕು

ಎಂಬ ವಿಚಾರದಲ್ಲಿ ಪ್ರತಿಯೊಬ್ಬ ಪ್ರಜೆ ಆಡಳಿತದ ನಿಯಮಗಳನ್ನು ಅರಿತು ಅವುಗಳನ್ನು ಅನುಷ್ಠಾನದಲ್ಲಿ ತರಲಿಕ್ಕೆ ಅವನು ಪ್ರಬುದ್ಧ ಆಗಬೇಕೆಂಬ ವಿಚಾರದಲ್ಲಿ ಮೀಸಲಾತಿಯ ನಿಯಮವನ್ನು ಜಾರಿಗೆ ತಂದು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೂ ಹಿಂದುಳಿದ ದುರ್ಬಲವರ್ಗಗಳಿಗೂ ಮೀಸಲಾತಿಯ ಸೌಲಭ್ಯವನ್ನು ಒದಗಿಸಿಕೊಟ್ಟು ನಾವು ಈ ದೇಶವನ್ನು ಆಳುತ್ತೇವೆ, ನಮಗೂ ಆಡಳಿತ ನಡೆಸುವುದಕ್ಕೆ ಬರುತ್ತದೆ ಎಂಬ ವಿಚಾರ ಎಲ್ಲಾ ಜನರಿಗೂ ಗೊತ್ತಾಗಲಿ; ನಮ್ಮನ್ನೂ ಮುಂದೆ ಕರೆಯುತ್ತಾರೆ, ನಮಗೂ ಸರ್ಕಾರದ ಅವಕಾಶವನ್ನು ಕೊಡುತ್ತಾರೆ, ನಾವೂ ಸರ್ಕಾರವನ್ನು ರಚಿಸುತ್ತೇವೆ, ನಾವೂ ಆಡಳಿತವನ್ನು ನಡೆಸುತ್ತೇವೆ ಎಂಬ ವಿಚಾರ ಪ್ರತಿಯೊಬ್ಬರಿಗೂ ಬರಲಿ ಎಂಬ ವಿಚಾರದಲ್ಲಿ ಮಾನ್ಯ ಗ್ರಾಮೀಣ ಅಭಿವೃದ್ಧಿ ಸಚಿವರಾದ ಶ್ರೀಮಾನ್ ಎಂ.ಪಿ.ಪ್ರಕಾಶ್ ಅವರು ಹಾಕಿಕೊಂಡಂಥ ಯೋಜನೆಗಳನ್ನು ನೋಡಿದರೆ ಅದು ಕ್ರಾಂತಿಕಾರಕವಾದ ಹೆಜ್ಜೆ ಎಂದು ಹೇಳಬಹುದು. ಗ್ರಾಮೀಣ ಪ್ರದೇಶದಲ್ಲಿ ಬೇಕಾದಂಥ ಕುಡಿಯುವ ನೀರು, ಅನೇಕ ಗ್ರಾಮಗಳಿಗೆ ವಿದ್ಯುತ್ ಸೌಕರ್ಯ, ಆಮೇಲೆ ಕಿರುನೀರು ಸರಬರಾಜು ಯೋಜನೆ, ಉದ್ಯೋಗ ಭರವಸೆ ಯೋಜನೆಯಂಥ, ಕೇಂದ್ರಸರ್ಕಾರದಿಂದ ದೊರೆಯತಕ್ಕ ಉದ್ಯೋಗ ಭರವಸೆ ಯೋಜನೆಯನ್ನು ಎಲ್ಲಾ ತಾಲ್ಲೂಕು ಮಟ್ಟಕ್ಕೆ ಅಂದರೆ 175 ತಾಲ್ಲೂಕುಗಳಿಗೂ ವಿಸ್ತರಿಸಿ ಎಲ್ಲರೂ ಅದರ ಸದುಪಯೋಗ ಪಡೆಯಲಿ, ಅದರಿಂದ ಪ್ರಗತಿ ಹೊಂದಲಿ ಎಂಬ ಒಂದು ಮಾರ್ಗೋಪಾಯಗಳನ್ನು ಸೂಚಿಸಿ ಅಲ್ಲಿರತಕ್ಕ ಸ್ಥಳೀಯ ಕೆಲಸಗಳನ್ನು ಆಗಿಂದಾಗ್ಗೆ ಸ್ಥಳೀಯ ಚುನಾಯಿತ ಪ್ರತಿನಿಧಿಗಳ ಮೂಲಕ ಪಡೆಯಬೇಕು ಎಂಬ ವಿಚಾರದಲ್ಲಿ ಗ್ರಾಮೀಣಾಭಿವೃದ್ಧಿ ಇಲಾಖೆ ಒಂದು ಅಗ್ರಗಣ್ಯವಾದಂಥ ಪಾತ್ರವನ್ನು ಇಲ್ಲಿ ವಹಿಸಿದೆ. ಇದೂ ಅಲ್ಲದೆ ಸ್ವಶ್ತಿ ಗ್ರಾಮ ಯೋಜನೆಯಂಥ ಒಂದು ಕ್ರಾಂತಿಕಾರಕವಾದಂಥ ಯೋಜನೆ ಸುಮಾರು 100 ಗ್ರಾಮಗಳಲ್ಲಿ ಜಾರಿಗೆ ಬರುತ್ತದೆ. ಈಗಾಗಲೇ ಕೆಲವು ಗ್ರಾಮಗಳಲ್ಲಿ ಅದನ್ನು ಅಳವಡಿಸಲಾಗಿದೆ. ಜವಾಹರ ರೋಜ್‌ಗಾರ್ ಯೋಜನೆ ಮುಖಾಂತರ ಸ್ಥಳೀಯ ಗ್ರಾಮಪಂಚಾಯಿತಿಗಳಿಗೆ ಅಧಿಕಾರವನ್ನು ನೀಡಿ ಅಲ್ಲಿರತಕ್ಕ ಗ್ರಾಮ ಮಟ್ಟದಲ್ಲಿರತಕ್ಕ ಅನೇಕ ಕೆಲಸಗಳಿಗೆ ಒತ್ತುಗಳನ್ನು ಕೊಟ್ಟು ಅಲ್ಲಿರತಕ್ಕ ಸಮಸ್ಯೆಗಳನ್ನು ಶೀಘ್ರವಾಗಿ ಪರಿಹರಿಸಲಿಕ್ಕೆ ಮಾಡಿದಂಥ ಒಂದು ಯೋಜನೆ ಜವಾಹರ ರೋಜ್‌ಗಾರ್ ಯೋಜನೆಯಲ್ಲಿ ಖರ್ಚಾದಂಥ ಹಣ 672 ಕೋಟಿ ರೂಪಾಯಿಗಳು. ಈ ಹಿಂದೆ 4086 ಕೋಟಿ ಐದು ವರ್ಷದಲ್ಲಿ ಖರ್ಚಾಗಿತ್ತು. ಆದರೆ ಕಳೆದ ಮೂರು ವರ್ಷದಲ್ಲಿ 682 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದನ್ನು ನೋಡಿದರೆ ಆದಂಥ ಕೆಲಸಗಳ ಒಂದು ವಿವರವನ್ನು ಪಡೆಯುವಂಥ ವಿಚಾರದಲ್ಲಿ ಹೇಳಿಕೆಗಳನ್ನು ಕೊಡಬಹುದು. ಇನ್ನು ಕುಡಿಯುವ ನೀರಿಗಾಗಿ ಹೊಡೆದಂಥ ಕೊಳವೆಬಾವಿಗಳ ಸಂಖ್ಯೆ ಸಾವಿರಾರು. ಆಮೇಲೆ ನಗರಪ್ರದೇಶಗಳಲ್ಲಿ ಕುಡಿಯುವ ನೀರು ಒದಗಿಸುವುದಕ್ಕೆ ಸರ್ಕಾರ ಹಾಕಿಕೊಂಡಂಥ ಯೋಜನೆಗಳನ್ನು ನೋಡಿದರೆ 120 ಕೋಟಿ ರೂಪಾಯಿಗಳ ಒಂದು ವೆಚ್ಚದಲ್ಲಿ ಸುಮಾರು 41 ಹೊಸ ಯೋಜನೆಗಳಿಗೆ ಮಂಜೂರಾತಿಯನ್ನು ನೀಡಲಾಗಿದೆ. ಇದಲ್ಲದೆ

132 ಕೋಟಿ ರೂಪಾಯಿಗಳ ಒಂದು ಸಹಾಯವನ್ನು ಕೇಂದ್ರಸರ್ಕಾರದಿಂದ ಪಡೆದು ಮೂರು ದೊಡ್ಡ ಪಟ್ಟಣಗಳಿಗೆ ಕುಡಿಯುವ ನೀರನ್ನು ಒದಗಿಸುವಂಥ ಯೋಜನೆಯನ್ನು ಸರ್ಕಾರ ಹಾಕಿಕೊಂಡಿದೆ. ಈಗಾಗಲೇ ಅನೇಕ ಯೊಜನೆಗಳನ್ನು ಅನುಷ್ಠಾನಕ್ಕೆ ತಂದು ಇನ್ನೂ ಅನೇಕ ಹೊಸ ಯೋಜನೆಗಳನ್ನು ಅನುಷ್ಠಾನಕ್ಕೆ ತರುವುದಕ್ಕೆ ಸರ್ಕಾರ ಹಾಕಿಕೊಂಡಂಥ ವಿಚಾರವನ್ನು ಪಂಚಾಯತ್‌ರಾಜ್ ಇಲಾಖೆ ತಿಳಿಯಪಡಿಸಿದೆ. ಮುಖ್ಯಪಾತ್ರವನ್ನು ವಹಿಸತಕ್ಕ ವಿದ್ಯುತ್ ಇಲಾಖೆ. ಪ್ರತಿಯೊಂದು ಕೆಲಸ ನಡೆಯಬೇಕಾದರೆ ವಿದ್ಯುತ್ ಬೇಕೇಬೇಕು. ಆ ವಿದ್ಯುತ್ ಸ್ಥಾಪನೆಯಲ್ಲಿ ಈಗ ಇದ್ದಂಥ 3200 ಮೆಗಾವ್ಯಾಟ್‌ನಿಂದ 7500 ಮೆಗಾವ್ಯಾಟ್ ವಿದ್ಯುತ್ತನ್ನು ನಾವು ಪಡೆಯಲಿಕ್ಕೆ ಯೋಜನೆಗಳನ್ನು ಹಾಕಿಕೊಂಡಿದ್ದೇವೆ. ಈ ಡಿಸ್ಟ್ರಿಬ್ಯೂಷನ್ ಸಿಸ್ಟಂನಲ್ಲಿ ಇದ್ದಂಥ ಒಂದು ಸಮಸ್ಯೆಯನ್ನು ದೂರ ಮಾಡುವುದಕ್ಕೆ ಅನೇಕ ಖಾಸಗಿಯವರಿಂದ ಸಹಾಯ ಹಸ್ತವನ್ನು ಪಡೆದು ಅವರ ಮನಸ್ಸನ್ನು ಒಲಿಸಿ ವಿದ್ಯುತ್ ವಿತರಣಾ ವ್ಯವಸ್ಥೆಯನ್ನು ಸರಿ ಮಾಡುವುದಕ್ಕೆ ಸರ್ಕಾರ ಶತಪ್ರಯತ್ನಮಾಡುತ್ತದೆ ಎಂಬ ಮಾತನ್ನು ನಾನು ಇಲ್ಲಿ ಹೇಳಬಯಸುತ್ತೇನೆ. ಅದರಲ್ಲಿ ರಾಯಚೂರು ಶಾಖೋತ್ಪನ್ನ ಘಟಕ, ಆಮೇಲೆ ಕೋಜೆಂಟ್ರಿಕ್ಸ್ ವಿದ್ಯುತ್ ಯೋಜನೆ. ಇದಕ್ಕೆ ಇನ್ನೂ ಕೇಂದ್ರಸರ್ಕಾರದಿಂದ ಅನುಮತಿ ಬರಬೇಕು. ಆದರೂ ಸಹ ಗಾಳಿಯಿಂದ ಸುಮಾರಾಗಿ 500 ಮೆಗಾವ್ಯಾಟ್ ವಿದ್ಯುತ್ ಉತ್ಪಾದಿಸಬಹುದು ಎನ್ನುವಂಥ ವಿಚಾರದಲ್ಲಿ ಈಗಾಗಲೇ ಸರ್ವೆ ಕಾರ್ಯ ಮುಗಿದು ಆ ಯೋಜನೆಗಳ ಅನುಷ್ಠಾನವನ್ನು ಸರ್ಕಾರ ಕಾದುನೋಡುತ್ತಿದೆ ಎಂಬ ಮಾತನ್ನು ನಾನು ಇಲ್ಲಿ ಹೇಳಬಯಸುತ್ತೇನೆ. ಮುಖ್ಯವಾಗಿ ಗ್ರಾಮಾಂತರ ಪ್ರದೇಶ ಇರಲಿ ನಗರಪ್ರದೇಶ ಇರಲಿ ಅಲ್ಲಿರತಕ್ಕ ಸಂಪರ್ಕವನ್ನು ಕಲ್ಪಿಸಿಕೊಡುವಂಥ ಯೋಜನೆ ರಸ್ತೆಗಳ ಡಾಂಬರೀಕರಣ ಅಥವಾ ರಸ್ತೆಗಳ ಒಂದು ದುರಸ್ತಿ. ಈ ಯೋಜನೆಗಳಿಗಾಗಿ ಸರ್ಕಾರ 8ನೇ ಯೋಜನೆಯಲ್ಲಿ 273 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ 3972 ಕಿಲೋಮೀಟರ್ ರಸ್ತೆಗಳಿಗೆ ಡಾಂಬರೀಕರಣ ಮಾಡುವಂಥ ವಿಚಾರವನ್ನು ಹಾಕಿಕೊಂಡಿದೆ. ಈಗಾಗಲೇ ಕೆಲಸವನ್ನು ಪೂರೈಸಲಾಗಿದೆ. 9ನೇ ಪಂಚವಾರ್ಷಿಕ ಯೋಜನೆಯಲ್ಲಿ 803 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ವಿಶ್ವಬ್ಯಾಂಕಿನಿಂದ ಇನ್ನೂ 900 ಕೋಟಿ ರೂಪಾಯಿಗಳ ಒಂದು ಬೇಡಿಕೆಯನ್ನು ನಮ್ಮ ಸರ್ಕಾರ ಇಟ್ಟಿದೆ. ಇದರಿಂದ ಇನ್ನೂ ಹೆಚ್ಚಿನ ಡಾಂಬರೀಕರಣ ಮಾಡಲಿಕ್ಕೆ, ರಸ್ತೆಗಳನ್ನು ನಿರ್ಮಾಣ ಮಾಡಲಿಕ್ಕೆ ಸರ್ಕಾರ ಪ್ರಯತ್ನಶೀಲವಾಗಿ ಅದರ ವಿಚಾರವನ್ನು ತೆಗೆದುಕೊಳ್ಳುತ್ತದೆ ಎಂಬ ಭಾವನೆಯನ್ನು ನಾನು ಇಲ್ಲಿ ತಾಳಬಯಸುತ್ತೇನೆ. ಇನ್ನು ಖಾಸಗಿಯವರಿಂದ ಮೈಸೂರು ಬೆಂಗಳೂರು ರಸ್ತೆಯನ್ನು ಎಕ್ಸ್‌ಪ್ರೆಸ್ ರಸ್ತೆ, ವೇಗದೂತ ರಸ್ತೆ ನಿರ್ಮಾಣಕ್ಕೆ ಸಹಾಯಧನವನ್ನು ಪಡೆದು ಆ ಯೋಜನೆ ಈಗಾಗಲೇ ಕಾರ್ಯರೂಪಕ್ಕೆ ಬಂದಿದೆ. ಆ ಮಾತನ್ನು ನಾನು ಏತಕ್ಕೆ ಹೇಳಬಯಸುತ್ತೇನೆಂದರೆ ಈಗಲೇ ವಾಹನದ ದಟ್ಟಣೆ ಹೆಚ್ಚಾಗಿರುವ ಈ ಸನ್ನಿವೇಶದಲ್ಲಿ ರಸ್ತೆಗಳು ಸಮರ್ಪಕವಾಗಿರಬೇಕು, ಅವುಗಳ ಸ್ಥಿತಿ ಸುಧಾರಣೆಯಾಗಬೇಕು ಎನ್ನುವಂಥ ವಿಚಾರದಲ್ಲಿ, ಅಪಘಾತರಹಿತವಾಗಿರಬೇಕು ಎನ್ನುವಂಥ ವಿಚಾರದಲ್ಲಿ ಸರ್ಕಾರ ಒಂದು

ದಿಟ್ಟ ಹೆಜ್ಜೆಯನ್ನು ಇಟ್ಟು ಅನೇಕ ಖಾಸಗಿಯವರಿಂದ, ವಿಶ್ವಬ್ಯಾಂಕ್ ನೆರವಿನಿಂದ ಈ ರಸ್ತೆಗಳ ನಿರ್ಮಾಣ ಮಾಡಿ ಒಂದು ಮಹತ್ತರವಾದ ಪಾತ್ರವನ್ನು ವಹಿಸುತ್ತಿದೆ.

ಇನ್ನು ನಗರಪ್ರದೇಶಗಳಿಗೆ ಹಾಕಿಕೊಂಡಂತಹ ಅನೇಕ ಹೊಸ ಯೋಜನೆಗಳಿವೆ. ಅದರಲ್ಲಿ ಮುಖ್ಯವಾಗಿ ಆಶ್ರಯ ತಾಣ, ಇದು ಬೇರೆಯವರು ನಗರಪ್ರದೇಶಗಳಿಗೆ ಬಂದಾಗ ಪರ ಸ್ಥಳಗಳಿಂದ ಬಂದಂತಹ ಜನರಿಗೆ ಅಥವ ನಿರ್ಗತಿಕರಿಗೆ ದುರ್ಬಲವಾದವರಿಗೆ ಅನುಕೂಲವಾಗಲಿ ಎನ್ನುವ ದೃಷ್ಟಿಯಲ್ಲಿ ಕಡಿಮೆ ಹಣ ಪಾವತಿ ಮಾಡಿ ರಾತ್ರಿ ತಂಗಲಿಕ್ಕೆ ಅವರಿಗೆ ಸುಲಭ ಶೌಚಾಲಯ ನಿರ್ಮಿಸಲಿಕ್ಕೆ, ಸ್ನಾನಕ್ಕೆ ಅನುಕೂಲ ಮಾಡಿಕೊಡುವಂತಹ ಕಾರ್ಯಕ್ರಮವನ್ನು ಸರ್ಕಾರ ಹಾಕಿಕೊಂಡಿದೆ. ಅವು ಸುಮಾರು ಐದು ಪಟ್ಟಣಗಳಿಗೆ ಈವೊಂದು ಯೋಜನೆ ಅನ್ವಯಿಸುತ್ತದೆ. ಸರ್ಕಾರ ಇನ್ನು ಅನೇಕ ಯೋಜನೆಗಳನ್ನು ಹಾಕಿಕೊಂಡಿದೆ. ಅಭಿವೃದ್ಧಿ ಪರವಾದ ಯೋಜನೆಗಳನ್ನು ಹಾಕಿಕೊಂಡಿದೆ. ಅದರಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ. ಜನಸಂಖ್ಯೆಯ ನಿಯಂತ್ರಣದೊಂದಿಗೆ ಮಹಿಳಾ ಮತ್ತು ಮಕ್ಕಳ ಆರೋಗ್ಯವನ್ನು ಕಾಪಾಡುವ ದೃಷ್ಟಿಯನ್ನಿಟ್ಟುಕೊಂಡು ಎಲ್ಲಾ ಆಸ್ಪತ್ರೆಗಳಲ್ಲಿ ಹೊಸದಾಗಿ ಔಷಧಿಗಳನ್ನು ಪೂರೈಸುವಂತಹ ವಿಚಾರ ಈ ಸರ್ಕಾರಕ್ಕೆ ಇದೆ. ಈ ಯೋಜನೆ ಈಗಾಗಲೇ ಸಿದ್ಧವಾಗಿದೆ-ಎನ್ನುವ ಮಾತನ್ನು ಇಲ್ಲಿ ಹೇಳಬಯಸುತ್ತೇನೆ. ಈ ಸರ್ಕಾರ ಮಾಡಿದಂತಹ ಘನ ಕಾರ್ಯವೆಂದರೆ ನೆನಗುದಿಗೆ ಬಿದ್ದಂತಹ ಜಿಲ್ಲಾ ವಿಂಗಡಣೆ. ಜಿಲ್ಲೆಗಳ ವಿಂಗಡಣೆ ಬಗ್ಗೆ ಎಲ್ಲರ ಬೇಡಿಕೆಯಿತ್ತು. ಅನೇಕ ವರ್ಷಗಳಿಂದ ನೆನೆಗುದಿಗೆ ಬಿದ್ದಂತಹ ಒಂದು ಯೋಜನೆ. ಆಡಳಿತ ಚುರುಕಾಗಬೇಕು, ಆಡಳಿತ ಸೀಮಿತವಾಗಿರಬೇಕು ಎನ್ನುವಂತಹ ವಿಚಾರದಲ್ಲಿ ಜಿಲ್ಲಾ ವಿಂಗಡಣೆ, ದೊಡ್ಡ ಜಿಲ್ಲೆಗಳನ್ನು ಸಣ್ಣ ಜಿಲ್ಲೆಗಳನ್ನಾಗಿ ಪರಿವರ್ತಿಸಿ ಜನರಿಗೆ ಅನುಕೂಲ ಮಾಡಿಕೊಟ್ಟರೆ ಜನರಿಗೆ ಸಹಾಯವಾಗುತ್ತದೆ ಎನ್ನುವ ದೃಷ್ಟಿಯಿಂದ ನಮ್ಮ ರಾಜ್ಯದಲ್ಲಿ ಏಳು ಹೊಸ ಜಿಲ್ಲೆಗಳು ಪ್ರಾರಂಭವಾಗಿವೆ.

ಇನ್ನು ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಇಡೀ ಆಡಳಿತ ಇಡೀ ರಾಜ್ಯದಲ್ಲಿ ಮೂರು ಹಂತದಲ್ಲಿತ್ತು. ಹಣಕಾಸಿನ ವ್ಯವಸ್ಥೆಯು ರಾಜ್ಯಮಟ್ಟದಲ್ಲಿತ್ತು. ನೌಕರರ ಆಯ್ಕೆಯು ರಾಜ್ಯಮಟ್ಟದಲ್ಲಿತ್ತು. ನೌಕರರ ಪ್ರತಿಭಟನೆಯ ನಡುವೆಯೂ ನಮ್ಮ ಸರ್ಕಾರ ಸಾರಿಗೆ ಮಂತ್ರಿಗಳಾದ ಶ್ರೀ ಪಿ.ಜಿ.ಆರ್.ಸಿಂಧ್ಯಾರವರು ನೌಕರರ ಪ್ರತಿಭಟನೆಯನ್ನು ಲಕ್ಷಿಸದೆ ಜನರ ಹಿತಕ್ಕೆ ಪ್ರಯಾಣಕರ ಹಿತಕ್ಕೆ ಆರ್ಥಿಕ ಮತ್ತು ಆಡಳಿತ ಸುಧಾರಣೆಯ ದೃಷ್ಟಿಯಿಂದ ಮೂರು ವಿಭಾಗಗಳನ್ನಾಗಿ ಮಾಡಿ ಅದನ್ನು ಕಾರ್ಯರೂಪಕ್ಕೆ ತಂದು ಈಗಾಗಲೇ ಕೆಲಸವನ್ನು ಪ್ರಾರಂಭಿಸಿದ್ದಾರೆ. ವಿಭಾಗಮಟ್ಟದಲ್ಲಿ ರಸ್ತೆ ಸಾರಿಗೆ ಸಂಸ್ಥೆಯನ್ನು ಒಡೆದು ಕೆಲಸ ಮಾಡಿದ್ದರಿಂದ ಆರ್ಥಿಕ ದೃಷ್ಟಿಯಿಂದ ಹೆಚ್ಚಳ ಕೂಡ ಆಗಿದೆ. ಆಡಳಿತ ಮಟ್ಟದಲ್ಲಿ ಚುರುಕಾಗಿದೆ. ಈವೊಂದು ಕೆಲಸವನ್ನು ಯಾವಾಗಲೋ ಮಾಡಬೇಕಾಗಿತ್ತು. ಈಗ ಅದನ್ನು ಕಾರ್ಯರೂಪದಲ್ಲಿ ತಂದಂತಹ ಸರ್ಕಾರ ಜನತಾದಳ ಸರ್ಕಾರವೆಂದು ನಾನು ಹೇಳಬಯಸುತ್ತೇನೆ. ಇನ್ನು ಹಲವಾರು ಯೋಜನೆಗಳನ್ನು ನಮ್ಮ ಸರ್ಕಾರ

ಹಾಕಿಕೊಂಡಿದೆ. ಆ ಯೋಜನೆಗಳನ್ನು ಅನುಷ್ಠಾನದಲ್ಲಿ ತರಲಿಕ್ಕೆ ಪ್ರಾಮಾಣಿಕ ಪ್ರಯತ್ನವನ್ನು ಸರ್ಕಾರ ಮಾಡಿದೆ ಎನ್ನುವುದನ್ನು ನೋಡಿದ್ದೇ ಆದರೆ ಅವುಗಳ ಶ್ರೇಯಸ್ಸು ನಮ್ಮಸರ್ಕಾರಕ್ಕೆ ಬರುತ್ತದೆನ್ನುವ ಮಾತನ್ನು ಹೇಳಿದರೆ ತಪ್ಪಾಗಲಿಕ್ಕಿಲ್ಲ.

ಇನ್ನು ನಮ್ಮ ಸರ್ಕಾರ ಸುಮಾರು 6300 ಕ್ರೀಡಾಪಟುಗಳು ಭಾಗವಹಿಸಿದಂತಹ ರಾಷ್ಟ್ರೀಯ ಕ್ರೀಡಾಕೂಟವನ್ನು ಏರ್ಪಡಿಸಿ ಅದರಲ್ಲಿ ಯಶಸ್ವಿಯಾಗಿದೆ. ಅದನ್ನು ಯಶಸ್ವಿಗೊಳಿಸಿ ಮಾದರಿಯಾದ ರಾಜ್ಯ ಕರ್ನಾಟಕ ರಾಜ್ಯವೆಂದು ಹೆಸರು ಬಂತು. ಇಲ್ಲಿ ಶಾಂತಿ ಸೌಹಾರ್ದತೆಯಿಂದ ಕ್ರೀಡೆಗಳನ್ನು ನಡೆಸಲಾಯಿತು. ನಮ್ಮ ರಾಜ್ಯದ ಕ್ರೀಡಾಪಟುಗಳು ಚಿನ್ನದ ಪದಕ ಮತ್ತು ಬೆಳ್ಳಿಯ ಪದಕಗಳನ್ನು ಹೆಚ್ಚು ಪಡೆದುಕೊಂಡದ್ದನ್ನು ನೋಡಿದರೆ ನಮ್ಮ ರಾಜ್ಯದ ಕ್ರೀಡಾಪಟುಗಳು ಯಾವುದರ್ಲಲೂ ಹಿಂದೆ ಇಲ್ಲವೆನ್ನುವ ಭಾವನೆ ಬರುತ್ತದೆ. ಇನ್ನು ಮುಂದೆ ಬರತಕ್ಕ ಕ್ರೀಡಾಪಟುಗಳಿಗೆ ಅದರಲ್ಲಿ ಆಸಕ್ತಿಯಿಂದ ಭಾಗವಹಿಸುವಂತೆ ಸರ್ಕಾರ ಆ ಕೆಲಸವನ್ನು ಯಶಸ್ವಿಗೊಳಿಸಿದೆ ಎನ್ನುವ ಮಾತನ್ನು ಹೇಳಬಯಸುತ್ತೇನೆ. ಹಿಂದಿನ ಸರ್ಕಾರಗಳು ಇದ್ದಂತಹ ಕಾಲದಲ್ಲಿ ನ್ಯಾಯಾಲಯದ ಮುಂದೆ ಅನೇಕ ಪ್ರಕರಣಗಳು ಇದ್ದವು. ನಮ್ಮ ಸರ್ಕಾರ ನ್ಯಾಯಾಲಯದ ಮುಂದಿದ್ದ 24 ಸಾವಿರ ಪ್ರಕರಣಗಳನ್ನು ಇತ್ಯರ್ಥ ಮಾಡಿ ಇಡೀ ದೇಶದಲ್ಲಿಯೇ ನಮ್ಮರಾಜ್ಯ ಶಾಂತಿ ನೆಲೆಸುವುದಕ್ಕೆ ಕಾರಣವಾಗಿರತಕ್ಕ ಈ ಸರ್ಕಾರ ಅನೇಕ ಪ್ರಕರಣಗಳನ್ನು ಇತ್ಯರ್ಥಗೊಳಿಸುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ. ಅನೇಕ ಯೋಜನೆಗಳ ಬಗ್ಗೆ ಈಗಾಗಲೇ ಮಾನ್ಯ ಹಿರಿಯ ಶಾಸಕರಾದ ಶ್ರೀ ಬಿ.ಸೋಮಶೇಖರ್‌ರವರು ವಿವರವಾಗಿ ಹೇಳಿದ್ದಾರೆ. ಆದರೂ ಸಹ ಕೊನೆಯದಾಗಿ ಒಂದು ಮಾತನ್ನು ಹೇಳಬಯಸುತ್ತೇನೆ. ಸುಮಾರು 50 ವರ್ಷಗಳಿಂದ ಆಗಲಾರದಂಥ ಕೆಲಸಗಳನ್ನು ಮಾಡಿದಂತಹ ಸರ್ಕಾರ ನಮ್ಮ ಜನತಾದಳ ಸರ್ಕಾರ. ಶ್ರೀ ಕೃಷ್ಣನ ಬಗ್ಗೆ ಕವಿ ಒಂದು ಮಾತನ್ನು ಹೇಳುತ್ತಾರೆ, ಅದು ಈ ರೀತಿ ಇದೆ.

ವಸುದೇವಸುತಂ ದೇವಂ ಕಂಸಚಾಣೂರ ಮರ್ಧನಂ ದೇವಕಿ
ಪರಮಾನಂದಂ ಕೃಷ್ಣಂ ವಂದೇ ಜಗದ್ಗುರು ಆಕಾಶತ್ ಪತಿತಂ ತ್ವಯಂ
ಯಥಾ ಗಚ್ಚತಿ ಸಾಗರಂ ಸರ್ವಜೀವ ನಮಸ್ಕಾರಂ ಕೇಶವನ್ ಪ್ರತಿಗಚ್ಚತಿ''

ಕೃಷ್ಣನ ಬಗ್ಗೆ ವರ್ಣನೆ ಮಾಡುತ್ತಾ ಕವಿ ಹೀಗೆ ಹೇಳುತ್ತಾರೆ. ಇದರ ಅರ್ಥವೇನೆಂದರೆ ಯಾವರೀತಿ ಆಕಾಶದಿಂದ ಬಿದ್ದಂತಹ ನೀರು ನದಿಗಳ ಮುಖಾಂತರ ಹಳ್ಳಗಳ ಮುಖಾಂತರ ಹೋಗಿ ಸಾಗರವನ್ನು ಸೇರುತ್ತದೋ ಅದೇರೀತಿ ನಾವುಗಳೆಲ್ಲಾ ಮಾಡಿದಂತಹ ನಮಸ್ಕಾರಗಳು ಆ ಕೇಶವನಿಗೆ ಸಲ್ಲುತ್ತವೆ ಎನ್ನುವ ಮಾತನ್ನು ಹೇಳಿದ್ದು ನೋಡಿದರೆ 50 ವರ್ಷಗಳಿಂದ ಆಗಬಾರದ ಕೆಲಸಗಳನ್ನು ಜನತಾದಳ ಸರ್ಕಾರ ಮಾಡಿದೆ; ಈ ದಿಸೆಯಲ್ಲಿ ಪ್ರಾಮಾಣಿಕ ಪ್ರಯತ್ನವನ್ನು ಮಾಡಿ ಜನರ ಆಕೋತ್ತರಗಳನ್ನು ಈಡೇರಿಸಿದೆ. ಆದ್ದರಿಂದ ಆ ಶ್ರೇಯಸ್ಸು ಜನತಾದಳ ಸರ್ಕಾರಕ್ಕೆ ಸಲ್ಲುತ್ತದೆನ್ನುವ

ಮಾತನ್ನು ಹೇಳುತ್ತೇನೆ. ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ವಂದನಾರ್ಪಣೆಯ ನಿಮಿತ್ತ ನನಗೆ ಮಾತನಾಡಲು ತಾವು ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಉಪಾಧ್ಯಕ್ಷರಿಗೆ ನನ್ನ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು: ಈಗ ಸದನವನ್ನು ಮುಂದೂಡುತ್ತಿದ್ದೇನೆ. ಸದನವು ನಾಳೆ ಬೆಳಿಗ್ಗೆ 11 ಗಂಟೆಗೆ ಪುನಃ ಸೇರುತ್ತದೆ.

(ಸದನವು 5 ಗಂಟೆ 28 ನಿಮಿಷಳಿಗೆ ಮುಂದೂಡಲ್ಪಟ್ಟು ನಾಳೆ ಬೆಳಿಗ್ಗೆ 11 ಗಂಟೆಗೆ ಪುನಃ ಸೇರಲು ನಿಶ್ಚಯಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)